**Volume: 5** **Issue: 8** **Pages: 08-16**




# ಭಾರತೀಯ ಮತ್ತು ಪಾಶ್ಚಿಮಾತ್ಯ ಕಾವ್ಯ ಶಾಸ್ತ್ರದಲ್ಲಿ 'ಭವ್ಯತೆ' (Sublime) ಪರಿಕಲ್ಪನೆಯ ತೌಲನಿಕ ಚರ್ಚೆಗಳು

[*1] **Dr. Sumangala Reddy**

[*1] Department of Kannada Studies HOD Sharana Basava University Kalburgi, Karnataka, India.

**Article Info.**
**E-ISSN: 2583-6528**
**Impact Factor (QJIF): 8.4**
**Peer Reviewed Journal**
**Available online:**
**www.alladvancejournal.com**

**Received:** 26/July/2026
**Accepted:** 02/Aug/2026

**Abstract**
ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಬಳಕೆಯಾಗುವ ಸಬ್ ಲೈಮ್ ಎಂಬ ಮಾತಿಗೆ ಸಂವಾದಿಯಾಗಿ 'ಭವ್ಯತೆ' ಎಂಬ ಮಾತನ್ನು ಬಳಸಲಾಗುತ್ತಿದೆ. ಕನ್ನಡದ ಸಂದರ್ಭದಲ್ಲಿ ಈ ಮಾತನ್ನು ಮೊದಲು ಟಂಕಿಸಿ, ವಿವರಿಸಿದವರು ಕುವೆಂಪು ಅವರು, ಲಾಂಗಿನಸ್ಸ ಎಂಬ ರೋಮನ್ ಸಾಹಿತ್ಯ ಮೀಮಾಂಸಕನದೆಂದು ಹೇಳಲಾದ ಆನ್ ಸಬ್‌ಲೈಮ್ ಕೃತಿಯಲ್ಲಿ ಕಾವ್ಯದಿಂದ ಒದಗುವ ಸೌಂದರಾನುಭವದ ಒಂದು ಉನ್ನತ ಸ್ಥಿತಿಯನ್ನು ಸಬ್‌ಲೈಮ್ ಎಂದು ಹೇಳಲಾಗಿದೆ. ಭವ್ಯತೆ'ಗೆ ರಷ್ಯನ್ ಭಾಷೆಯಲ್ಲಿ Prostor ಎಂಬ ಪದವನ್ನು ಬಳಸುವಂತೆ ತೋರುತ್ತದೆ. Prestor ಎಂದರೆ ಭಯದ ಸೋಂಕೇ ಇಲ್ಲದ ವಿಸ್ತಾರ ಎಂದು ಅರ್ಥ. ದೃಗ್ಗೋಚರವಾಗುವ ವಿಸ್ತಾರವಾದ ಹುಲ್ಲುಗಾವಲುಗಳು, ಹೊನ್ನತನೆ ತೂಗುವ ಗದ್ದೆಯ ಹರವು. ಯಾವುದು ಯಾವ ರೂಪದಲ್ಲಾದರೂ ಭಯೋತ್ಪಾದಕವೋ ಅಥವಾ ಅದಕ್ಕೆ ಸಂಬಂಧಪಟ್ಟುದೋ ಅಥವಾ ಭಯಕ್ಕೆ ಸಂವಾದಿಯಾದ ರೂಪದಲ್ಲಿ ವರ್ತಿಸುತ್ತದೆಯೋ ಅದು ಭವ್ಯತೆಯ ಉಗಮಕ್ಕೆ ಕಾರಣ. ಭೀತಿಯಾಗಲಿ ವೇದನೆಯಾಗಲೀ ತೀರ ಸನಿಯವಾದಾಗ ಅವು ಯಾವ ಆನಂದವನ್ನೂ ನೀಡಲಾರವು; ಆಗ ಅವು ಬರಿ ಭಯಂಕರವಾಗಿ ತೋರುತ್ತವೆ, ಆದರೆ ಭಯವನ್ನುಂಟುಮಾಡುವ ವಸ್ತುಗಳೂ, ಅವುಗಳಿಂದ ಕೊಂಚ ಸರಿದು ನಿಂತು ನೋಡಿದಾಗ, ಮತ್ತು ಹಲವು ಮಾರ್ಪಾಡುಗಳಿಂದ ಆನಂದದಾಯಕವಾಗಬಲ್ಲುವು;

***Corresponding Author**
**Dr. Sumangala Reddy**
Department of Kannada Studies HOD
Sharana Basava University Kalburgi,
Karnataka, India.

**Keywords:** ಗ.ಭ-ಗಣಿತಾತ್ಮಕ (Mathematical) ಭವ್ಯ, ಶ.ಭ-ಶಕ್ತಾತ್ಮಕ (Dynamic) ಭವ್ಯ, ಸ.ಭ.-ಸರಣಿ ಭವ್ಯ. OS-ON THE SUBLIME, ಅ.ನ.-ಅಹಂಕಾರ ನಷ್ಟ, ಬ್ರ.ಲಾ-.-ಬ್ರಹ್ಮ ಲಾಭ ಭ.ಮಾ.-'ಭವ್ಯ ಮಾನಸ

## Introduction

ಎಡ್ವರ್ಡ್ ಬುಲಫ್ ತಮ್ಮ "ಸೈಕಿಕಲ್ ಡಿಸ್ಟೆನ್ಸ್"(ಮಾನಸಿಕ ಅಂತರ) ಸಿದ್ಧಾಂತದ ಮೂಲಕ ಭವ್ಯತೆಯನ್ನು (Sublimity) ವಿವರಿಸಿದ್ದಾರೆ. ವ್ಯಕ್ತಿಯು ತನ್ನ ಸ್ವಂತ ಭಯ ಮತ್ತು ಸ್ವಾರ್ಥಿ ಆತಂಕಗಳನ್ನು ಬದಿಗಿಟ್ಟು, ಅಪಾಯಕಾರಿ ಅಥವಾ ಭವ್ಯ ಘಟನೆಯನ್ನು ನಿಷ್ಪಕ್ಷಪಾತವಾಗಿ ವೀಕ್ಷಿಸಿದಾಗ 'ಭವ್ಯತೆಯ' ಸೌಂದರ್ಯಾನುಭವ ಉಂಟಾಗುತ್ತದೆ. ಕಡಲಿನಲ್ಲಿ ಮುಸುಕುವ ಮಂಜು ಭಯ ಹುಟ್ಟಿಸಿದರೂ, ಮಾನಸಿಕ ಅಂತರ ಕಾಯ್ದುಕೊಂಡಾಗ ಅದು ಅತ್ಯದ್ಭುತ ಸೌಂದರ್ಯವಾಗಿ ಗೋಚರಿಸುತ್ತದೆ.

## Materials and Methods

ಭವ್ಯತೆಯ ಸಿದ್ಧಾಂತವನ್ನು (Theory of Sublimity) ಅಧ್ಯಯನ ಮಾಡಲು ಅಗತ್ಯವಾದ ಪ್ರಮುಖ ಸಾಮಗ್ರಿಗಳು ಮತ್ತು ವಿಧಾನಗಳು: ಆಕರ ಸಾಮಗ್ರಿಗಳು (Materials): Longinus, Edmund Burke, Immanuel Kant ಮತ್ತು Edward Bullough ಅವರ ಮೂಲ ಕೃತಿಗಳು.

ಪಾಶ್ಚಿಮಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆ ಹಾಗೂ ಸೌಂದರ್ಯಶಾಸ್ತ್ರದ ಗ್ರಂಥಗಳು.

ಪ್ರಕೃತಿ ಸೌಂದರ್ಯ, ಕಲಾಕೃತಿಗಳು ಮತ್ತು ಸಾಹಿತ್ಯಿಕ ಮಹಾಕಾವ್ಯಗಳು.

### ಅಧ್ಯಯನ ವಿಧಾನಗಳು (Methods):

1. ವಿಮರ್ಶಾತ್ಮಕ ವಿಶ್ಲೇಷಣೆ:ಪ್ರಾಚೀನ ಹಾಗೂ ಆಧುನಿಕ ಸಿದ್ಧಾಂತಗಳ ತೌಲನಿಕ ಅಧ್ಯಯನ.
2. ಮನೋವೈಜ್ಞಾನಿಕ ಗ್ರಹಿಕೆ:'ಮಾನಸಿಕ ಅಂತರ' (Psychical Distance) ಮತ್ತು ಭೀತಿಯು ಭವ್ಯತೆಯನ್ನು ಉಂಟುಮಾಡುವ ಪ್ರಕ್ರಿಯೆಯ ಪರಿಶೀಲನೆ.
3. ಪ್ರಾಯೋಗಿಕ/ಪಠ್ಯ ಆಧಾರಿತ ಅನ್ವಯ: ಸಾಹಿತ್ಯಿಕ ಪಠ್ಯಗಳಲ್ಲಿ ಭವ್ಯತೆಯ ಅಂಶಗಳನ್ನು ಗುರುತಿಸುವುದು.

“Sublime:-ಗ್ರೀಕ್ ಪದದ ಮೂಲಾರ್ಥ-ಉದಾತ್ತ, ಉನ್ನತ ಕನ್ನಡದಲ್ಲಿ Sublime ಗೆ ಭವ್ಯತೆ ಎಂದವರು- ಕುವೆಂಪು, ಮಹೋನ್ನತಿ ಎಂದವರು-ಜಿ.ಎಸ್.ಎಸ್

**ಲಾಂಜಿನಸ್ ಪರಿಚಯ**

- -ಕಾಲ- ಕ್ರಿ.ಶ.1, ಸ್ಥಳ- ರೋಮ್
- -ಕೃತಿ- ಪೆರಿಹುಪ್ಸಾಸ್(ಗ್ರೀಕ್ ಕೃತಿ)1554ರಲ್ಲಿ ಇದನ್ನು ಮೊದಲ ಪ್ರಕಟಿಸಿದವನು~ ರಾಬರ್ಟೆಲ್ಲೊ
- -ಗ್ರೀಕ್ ವಿಮರ್ಶೆ ಪರಂಪರೆಯ ಕೊನೆಯ ಪ್ರತಿನಿಧಿ- ಲಾಂಜಿನಸ್

ಲಾಂಜಿನಸನು- ಪ್ಲಾಟಿನಸ್ ನ ಸ್ನೇಹಿತನು, ಅಥೆನ್ಸಿನಲ್ಲಿ ಫಾರ್‌ಫೆರಿಯ ಗುರುವು,ರಾಣಿ ಜೆನೋಬಿಯಾಳ ಮಂತ್ರಿಯೂ ಆಗಿದ್ದನು.

ಭವ್ಯ ಪದದ ಅರ್ಥ:-ಭವ್ಯ ಎಂದರೆ ಇರತಕ್ಕದ್ದು, ಅದಕ್ಕೆ ಭವಿಷ್ಯ ಎಂಬ ಕಾಲ ಸೂಚಕ ಅರ್ಥವೂ ಇದೆ.

ಮಹಾಭಾರತದ ಪ್ರಯೋಗ:-ಸುಂದರ, ತಕ್ಕ, ಉಚಿತವಾದ, ಅತಿಶಯವಾದ, ಮನೋಹರವಾದ, ರಮ್ಯವಾದ, ಲಲಿತವಾದ, ಅನುಕೂಲವಾದ, ಶುಭದಾಯಕವಾದ ಎನ್ನುವ ಅರ್ಥದಲ್ಲಿ ಅದು ಮಹಾಭಾರತದಲ್ಲಿ ಪ್ರಯೋಗವಾಗಿದೆ.

**'ಭವ್ಯ ಮಾನಸ':** ಗಂಭೀರ ಚಿತ್ತವೃತ್ತಿಯ, 'ಭವ್ಯರೂಪ' ಎಂದರೆ ನೋಡಲು ಚೆನ್ನಾಗಿರುವ ರೂಪದ ಎಂದು ಅರ್ಥವಾಗುತ್ತದೆ.

ಜೈನಗ್ರಂಥಗಳಲ್ಲಿ 'ಭವ್ಯ':- 'ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರಗಳಿಂದ ಪರಿಣತನಾಗುವವನು' ಎಂದೂ,

ರತ್ನತ್ರಯ ಯೋಗ್ಯತೆಗೆ ಭವ್ಯತೆ,

ಭವ್ಯಮಾಲೆ:- ಭವ್ಯತೆಯಿಂದ ಕೂಡಿದ ಜೀವ ಸಮೂಹಕ್ಕೆ ಭವ್ಯಮಾಲೆ- ಎಂದೂ ಅರ್ಥವಿದೆ

ಸಂಸ್ಕೃತ ಕಾವ್ಯಗಳಲ್ಲಿ ಭವ್ಯ:-ಆಶ್ಚರ್ಯ, ಭಯ, ಗೌರವ ಇವುಗಳನ್ನು ಒಳಗೊಳ್ಳುವ ಸಂದರ್ಭದ ಅನುಭವಕ್ಕೆ ವಪುಸ್ ಮತ್ತು ಯಕ್ಷ ಎನ್ನುವ ಮಾತು ಬಳಸಲ್ಪಟ್ಟಿದೆ.

**ಋಗ್ವೇದದಲ್ಲಿ ವಪುಸ್:** ಭವ್ಯ ಎಂದೇ ಅರ್ಥ. ಅಂತೆಯೇ 'ಯಕ್ಷ' ಎಂಬ ಪದವೂ.

Geldenr ಪ್ರಕಾರ ಯಕ್ಷ ಎಂದರೆ

1. ಸೋಜಿಗ, ರಹಸ್ಯ
2. ಆಶ್ಚರ್ಯ, ಕುತೂಹಲ
3. ಕಲಾವಿದನ ಅಥವಾ ಮೋಡಿಕಾರನ ಕೃತಿ
4. ಮಾಟ, ಮಂತ್ರ
5. ಪರಿವರ್ತನೆ, ಸಮೋಹಕತೆ
6. ಕೈ ಚಳಕ, ಭ್ರಮೆ
7. ಪವಾಡ
8. ವಿಸ್ಮಯದ ಮತ್ತು ೯, ಪ್ರಕೃತಿ ವೈಭವ ಎಂದೂ Geldenr ಎನ್ನುವವರು ಅರ್ಥ ಮಾಡಿದ್ದಾರೆ.

ಸಂಸ್ಕೃತ ಕಾವ್ಯದಲ್ಲಿಯ ಭವ್ಯ ಕಲ್ಪನೆಗಳು ವಾಯು ಕೇಶಗಳನ್ನು ಕೆದರಿ ವಿಹರಿಸುವ ಗಂಧರ್ವರ ಚಿತ್ರದಲ್ಲಿ, ಅಶ್ವಿನೀದೇವತೆಗಳ ಸಂಚಾರ ಚಿತ್ರಣದಲ್ಲಿ, ಇಂದ್ರನ ವೈಭವವದಲ್ಲಿ ಉಷೆಯ ಅನುಪಮ ದಿವ್ಯವರ್ಣನೆಯಲ್ಲಿ ಮತ್ತು ಇನ್ನೂ ವಿಶೇಷವಾದ ವರ್ಣನೆಗಳಲ್ಲಿ ಭವ್ಯತೆಗೆ ಬಳಸುವ ಕನ್ನಡದ ಪರ್ಯಾಯ ಪದಗಳು ಉದ್ದಾಮ, ಶ್ರೀರಮ್ಯ,, ಅತ್ಯದ್ಭುತ, ಗುಣ್ಮ. ಗಭೀರ ಇತ್ಯಾದಿ ಭವ್ಯತೆಗೆ ಕನ್ನಡ ಕವಿಗಳು ಕೊಟ್ಟ ಪರ್ಯಾಯ ಪದಗಳು

**ಪಂಪ:** ಶ್ರೀ ರಮ್ಯಂ,ಉದ್ದಾಮ ಭೀಮ,ಅತ್ಯದ್ಭುತ ಆಲಂಕಾರಿಕರು 'ಅದ್ಭುತದ' ಸ್ಥಾಯೀ ವಿಸ್ಮಯ ಎಂದೂ, ಲೋಕದಲ್ಲಿ ಎಲ್ಲೆಲ್ಲಿ ವಿಸ್ಮಯವನ್ನು ಕಾಣುವವೋ ಅಲ್ಲಲ್ಲಿ 'ಅದ್ಭುತ'ವಿರುವುದೆಂದು ಹೇಳಿದರು.

'ಶೃಂಗಾರವನ್ನು ಬಿಟ್ಟರೆ ಅದ್ಭುತವೇ ವಿಶೇಷ ವ್ಯಾಪಕವಾದುದು. ಅದನ್ನು ಒಂದು ಬಗೆಯ ಶೇಷರಸವೆಂದು ಹೇಳಬಹುದು... ಒಂದು ಸಂದರ್ಭದಲ್ಲಿ ಗೋಚರವಾಗುವ ರಸ ಯಾವುದೆಂದು ನಿರ್ಣಯಿಸಲು ಕಷ್ಟವಾದಾಗ ಅಲ್ಲಿಯದು ಬಹುಶಃ ಅದ್ಭುತರಸವಾಗಿರುತ್ತದೆ. ಕೆಲವರು ಲಕ್ಷಣಕಾರರು ಇನ್ನೂ ಮುಂದೆ ಹೋಗಿ ಅದ್ಭುತವೊಂದೇ ರಸವೆಂದು ಹೇಳುತ್ತಾರೆ.

ಭವ್ಯತೆ'ಗೆ ರಷ್ಯನ್ ಭಾಷೆಯಲ್ಲಿ Prostor ಎಂಬ ಪದವನ್ನು ಬಳಸುವಂತೆ ತೋರುತ್ತದೆ. Prestor ಎಂದರೆ ಭಯದ ಸೋಂಕೇ ಇಲ್ಲದ ವಿಸ್ತಾರ ಎಂದು ಅರ್ಥ. ದೃಗ್ಗೋಚರವಾಗುವ ವಿಸ್ತಾರವಾದ ಹುಲ್ಲುಗಾವಲುಗಳು, ಹೊನ್ನತನೆ ತೂಗುವ ಗದ್ದೆಯ ಹರವು

**ಭವ್ಯತೆಯ ವ್ಯಾಖ್ಯೆಗಳು**

**ಲಾಂಜಿನಸ್:**

1. ಅದು ಭಾಷೆಯಲ್ಲಿರಬೇಕಾದ ಒಂದು ಬಗೆಯ ಶಕ್ತಿ ಮತ್ತು ಪರಿಪೂರ್ಣತೆ ಎನ್ನುತ್ತಾನೆ.
2. “ಭವ್ಯತೆ ಎನ್ನುವುದು ಮಹಾ ಆತ್ಮವೊಂದರ ಪ್ರತಿಧ್ವನಿ.”
3. “ಯಾವ ಒಂದು ಕಾವ್ಯಭಾಗ ಧ್ವನಿಗರ್ಭಿತವಾಗಿದೆಯೋ, ಯಾವುದರ ಪ್ರಭಾವದಿಂದ ನಾವು ನಮ್ಮ ಗಮನವನ್ನು ಬೇರೆಯ ಕಡೆಗೆ ತಿರುಗಿಸುವುದು ಕಷ್ಟವೂ, ಅಸಾಧ್ಯವೂ ಎನಿಸುವುದೋ, ಯಾವುದು ನಮ್ಮ ಮನಸ್ಸಿನ ಮೇಲೆ ಗಾಢವೂ ಚಿರಕಾಲಿಕವೂ ಆದ ಮುದ್ರೆಯನ್ನು ಒತ್ತುತ್ತದೆಯೋ, ಆ ಭಾಗದಿಂದ ನಾವು ನಿಜವಾಗಿಯೂ ಭವ್ಯತಾ ಅನುಭವವನ್ನು ಪಡೆಯುತ್ತಿದ್ದೇವೆ.”

'Samual H Monk, The Sublime; p, 12-13:- ಬರವಣಿಗೆಯಲ್ಲಾಗಲೀ, ವಾಕ್ ಪ್ರೌಢಿಮೆಯಲ್ಲಾಗಲೀ ಇಂತಹ ಶಕ್ತಿಯುತವಾದ ಮತ್ತು ಪರಿಪೂರ್ಣವಾದ ಭಾಷಾ ಸಂಯೋಜನೆ ಅಪ್ರತಿಹತವಾಗಿ ಶ್ರೋತೃಗಳನ್ನು ಆಕ್ರಮಿಸುತ್ತದೆ ಮತ್ತು ಮೈ ಮರೆಸುತ್ತದೆ. ಹಲವು ವೇಳೆ ಮಾತಿನಮೋಡಿಗೆ ವಶವಾಗುವುದಾಗಲೀ, ವಶವಾಗುವುದನ್ನು ತಡೆಯಬಲ್ಲ ಶಕ್ತಿಯಾಗಲೀ ಶ್ರೋತೃಗಳಲ್ಲಿದ್ದರೂ, ಭವ್ಯತೆ ಮಾತ್ರ ಓದುಗರನ್ನು ಶ್ರೋತೃಗಳನ್ನು ತನ್ನ ಅಪ್ರತಿಹತವಾದ ಶಕ್ತಿಯಿಂದ ಆಕ್ರಮಿಸಿ ಗೆಲ್ಲುತ್ತದೆ.

W. Rhy Roberss:-ಭವ್ಯತೆ ಭಾಷೆಯ ಮಹೋನ್ನತಿಯಲ್ಲಿ ಮತ್ತು ಅತಿಶಯತೆಯಲ್ಲಿದೆ. ಅಂತಹ ಮಹೋನ್ನತ ಕಾವ್ಯಭಾಗ ಓದುಗನನ್ನು ಕೇವಲ ಸಮಾಧಾನಗೊಳಿಸುವುದಿಲ್ಲ, ಅವನನ್ನು ಪರಿವರ್ತಿಸುತ್ತದೆ. ಮೇಲೆತ್ತುತ್ತದೆ.

Carritt. Philosophies of Beauty, p. 36:-“ನಿಜವಾದ ಭವ್ಯತೆಯಿಂದ ನಮ್ಮ ಆತ್ಮ ಮೇಲಕ್ಕೆ ಎತ್ತಲ್ಪಟ್ಟ ಅನುಭವವಾಗುತ್ತದೆ. ಆ ಮಹೋನ್ನತಿಯಲ್ಲಿ ನಾವು ಯಾವುದು ಶ್ರವಣಗೋಚರವಾಯಿತೋ, ಅದನ್ನೇ ವಾಸ್ತವವಾಗಿ ಅನುಭವದಲ್ಲಿ ಪಡೆದಂತಾಗಿ ಒಂದು ಬಗೆಯ ಹೆಮ್ಮೆಯ ಹಿಗ್ಗಿನಲ್ಲಿ ನಿಲ್ಲುತ್ತೇವೆ.”

ಬ್ಯೋಲಿಯೋ (ಭವ್ಯತೆಯ ಬಗ್ಗೆ ಹೊಸ ಮೈಲಿಗಲ್ಲಿನ ರೂಪದ ವ್ಯಾಖ್ಯಾನ)-"ಭವ್ಯತೆ ಎನ್ನುವುದು ಕೇವಲ ವಾಕ್ ಪ್ರೌಢಿಯ ಪದರಚನಾ ಕೌಶಲಕ್ಕೆ ಸಂಬಂಧಿಸಿದ್ದಲ್ಲ, ಅದು ಆಲೋಚನೆಗೂ ಸಂಬಂಧಿಸಿದ್ದು, ಮಹೋನ್ನತವಾದ ಆಲೋಚನೆ ಸರಳ ಸಾಧಾರಣವಾದ ಪದಸಂಯೋಜನೆಯ ಮೂಲಕವೂ ಅಭಿವೃದ್ಧಿಗೊಳ್ಳಬಲ್ಲದು. ಇಂತಹ ಸರಳವಾದ ಪದರಚನೆಯೂ ಅದರಲ್ಲಿ ವ್ಯಕ್ತವಾದ ಆಲೋಚನೆಯ ಮಹತ್ತಿನಿಂದ ಪ್ರಶಂಸಾರ್ಹವಾದ ವಿಸ್ಮಯಕಾರಕವಾದ ಅದ್ಭುತವಾದ ಅನುಭವವನ್ನು ನೀಡಬಲ್ಲದು.

**ಅಡಿಸನ್ (೧೭ನೆ ಶ):** ಸುಂದರ ಮತ್ತು ಭವ್ಯ ಎನ್ನುವ ಎರಡು ಪದಗಳೂ ಬೇರೆ ಬೇರೆ ಎಂಬ ಅಭಿಪ್ರಾಯವನ್ನು ಮೊಟ್ಟಮೊದಲು ವ್ಯಕ್ತಪಡಿಸಿದವನು (ಇತರರು ಐಸ್ಯಾಕ್ ಹಾಕಿನ್, ಅಕಿನ್ ಸೈಡ್)

**Sublime:** ಯಾವ ಬರವಣಿಗೆ ಮಹತ್ತಾದುದು, ವಿಸ್ಮಯಗೊಳಿಸುವದೂ ಆತ್ಮವಿಸ್ತಾರಗೊಳಿಸುವುದೂ ಆಗಿದೆಯೋ ಅದು ಉದಾ:- ಮಿಲ್ಟನ್ ಅವನು 'ಭವ್ಯಕವಿ'

**Grand:** ಪ್ರಕೃತಿ ಸೌಂದರ್ಯ ಮತ್ತು ಕಲಾ ಸೌಂದರ್ಯದ ಭವ್ಯತೆಯ ಅನುಭವದಲ್ಲಿ ಭಯದ ಅಂಶ ಅತಿ ಮುಖ್ಯವೆಂದು ಪರಿಗಣಿಸಿ ತನ್ನ ಭವ್ಯತಾ ಸಿದ್ಧಾಂತವನ್ನು ಈ ಅಂಶದಮೇಲೆ ಸ್ಥಾಪಿಸಿದವನು:-ಎಡ್ಮಂಡ್ ಬರ್ಕ್

ಎಡ್ಮಂಡ್ ಬರ್ಕ್, "ಯಾವುದು ಯಾವ ವಿಧದಿಂದಲಾದರೂ ವೇದನೆಯ ಮತ್ತುಅಪಾಯದ ಭಾವನೆಗಳನ್ನು ಪ್ರಚೋದಿಸುತ್ತದೆಯೋ, ಎಂದರೆ ಯಾವುದು ಯಾವ ರೂಪದಲ್ಲಾದರೂ ಭಯೋತ್ಪಾದಕವೋ ಅಥವಾ ಅದಕ್ಕೆ ಸಂಬಂಧಪಟ್ಟುದೋ ಅಥವಾ ಭಯಕ್ಕೆ ಸಂವಾದಿಯಾದ ರೂಪದಲ್ಲಿ ವರ್ತಿಸುತ್ತದೆಯೋ ಅದು ಭವ್ಯತೆಯ ಉಗಮಕ್ಕೆ ಕಾರಣ. ಭೀತಿಯಾಗಲಿ ವೇದನೆಯಾಗಲೀ ತೀರ ಸನಿಯವಾದಾಗ ಅವು ಯಾವ ಆನಂದವನ್ನೂ ನೀಡಲಾರವು; ಆಗ ಅವು ಬರಿ ಭಯಂಕರವಾಗಿ ತೋರುತ್ತವೆ, ಆದರೆ ಭಯವನ್ನುಂಟುಮಾಡುವ ವಸ್ತುಗಳೂ, ಅವುಗಳಿಂದ ಕೊಂಚ ಸರಿದು ನಿಂತು ನೋಡಿದಾಗ, ಮತ್ತು ಹಲವು ಮಾರ್ಪಾಡುಗಳಿಂದ ಆನಂದದಾಯಕವಾಗಬಲ್ಲುವು; ಆನಂದದಾಯಕವಾಗುತ್ತದೆ. ಈ ವಿಷಯ ನಮ್ಮ ದೈನಂದಿನ ಅನುಭವಕ್ಕೆ ದೂರವಾದುದೇನಲ್ಲ"

ಹೀಗೆ ಒಂದು ವಸ್ತು ಭವ್ಯವಾಗಲು ಅಸ್ಪಷ್ಟತೆ ಅಗತ್ಯವೆಂದು ತೋರುತ್ತದೆ, ಕೇವಲ ಭಯವನ್ನುಂಟುಮಾಡುವುದರಿಂದಲೇ ಯಾವುದೂ ಭವ್ಯವಾಗಲಾರದು.

"ಯಾವ ಮಹತ್ತಾಗಲೀ ಅನಂತತೆಯ ಕಡೆಗೆ ಮೈಚಾಚದಿದ್ದ ಪಕ್ಷದಲ್ಲಿ ನಮ್ಮ ಮನಸ್ಸನ್ನು ಉನ್ನತಿಗೇರಿಸಲಾರದು, ಈ ಅನಂತತೆಗೆ ನಮ್ಮ ಅಂತರಂಗವನ್ನು ಒಂದು ಬಗೆಯ ರುದ್ರ ಮಾಧುರ್ಯದಿಂದ ತುಂಬುವ ಶಕ್ತಿ ಇದೆ. ಈ ರುದ್ರ ಮಧುರತೆಯೇ ಭವ್ಯತೆಯ ನಿಜವಾದ ಒರೆಗಲ್ಲು.

"ಸುಂದರವಾದ ವಸ್ತುಗಳಿಂದ ಆಗುವ ಅನುಭವ ಮನೋರಮ್ಯತೆಯ ಆನಂದವಾದರೆ, ಭವ್ಯವಸ್ತುಗಳಿಂದ ಆಗುವ ಅನುಭವ ಮಧುರವೇದನೆ"

Astonishing:- ಪ್ರಕೃತಿ ವಸ್ತುಗಳಿಂದಾಗುವ ಅನುಭವ, ಯಾವ ಒಂದು ಸ್ಥಿತಿಯಲ್ಲಿ ಕರಣಗಳು ಚೇಷ್ಟೆಗೆಟ್ಟು ಒಂದು ಬಗೆಯ ತ್ರಸ್ತತೆಯಲ್ಲಿ ನಿಲ್ಲುವುವೋ ಅಂತಹ ಸ್ಥಿತಿ; ಭವ್ಯತಾ ಅನುಭವ ಮನಸ್ಸನ್ನು ತುಂಬಿ ಅನ್ಯಚಿಂತೆಗೆ ಎಡೆಗೊಡದಂತಹ ಒಂದು ಸ್ಥಿತಿ.

ಬರ್ಕನ ದೃಷ್ಟಿಗೆ ಭವ್ಯತೆಯ ಅನುಭವವನ್ನು ಉಂಟುಮಾಡುವ ವಸ್ತುವಿಗಿಂತ, ಆ ಅನುಭವ ಮುಖ್ಯ.

ಭವ್ಯತೆಯ ಅನುಭವಕ್ಕೆ ಇಂದ್ರಿಯಾತೀತ ಅನುಭವ ಮುಖ್ಯ ಎಂದ ಮೀಮಾಂಸಕ:-ಉಷರ್

ಕ್ಯಾಂಟ್:- ಸೌಂದರ್ಯ ಎನ್ನುವುದು ಪರಿಮಿತವಾದ ಮತ್ತು ಒಂದು ನಿರ್ದಿಷ್ಟವಾದ ಆಕೃತಿಗಳಿಗೆ ಸಂಬಂಧಿಸಿದ್ದು, ಭವ್ಯತೆ ಅಸೀಮತೆಗೆ, ಆಕಾರರಾಹಿತ್ಯತೆಗೆ ಸಂಬಂಧಿಸಿದ್ದು....

ಭವ್ಯತೆಯ ಮುಖ್ಯ ಲಕ್ಷಣ ನಮ್ಮ ನಿರ್ಣಾಯಕ ಶಕ್ತಿಯನ್ನು ತಡೆದು, ನಮ್ಮನ್ನು ಅಪ್ಪಳಿಸುವುದು. ಅದು ನಮ್ಮ ಚೈತನ್ಯದ ಮೂಲವನ್ನೇ ಅಲ್ಲಾಡಿಸಿ ನಮ್ಮನ್ನು ಎತ್ತಿ ಎಸೆಯುತ್ತದೆ. ಇಲ್ಲಿ ಆಗುವ ಅನುಭವ, ಸೌಂದರಾನುಭವದಂತೆ ಇತ್ಯಾತ್ಮಕವಾದುದಲ್ಲ; ನೇತಾತ್ಮಕವಾದುದು. ಈ ಬಗೆಯ ನೇತ್ಯಾತ್ಮಕಾನಂದರೂಪಿಯಾದ ಈ ಭವ್ಯತಾ ಅನುಭವ, ಗಣಿತಾತ್ಮಕ (Mathematical) ಎಂದರೆ, ಸಾಮಗ್ರತಾಭಾವದಿಂದ ಉದ್ದೀಪನಗೊಳ್ಳುವ ಮತ್ತು, ಶಕ್ತಾತ್ಮಕ (Dynamic) ವಸ್ತುಗಳಿಂದ ಉಂಟಾಗುತ್ತದೆ ಎನ್ನುತ್ತಾನೆ.

"ಭವ್ಯತೆ ಎನ್ನುವುದು ನಮ್ಮ ಅಂತರಂಗದ ವ್ಯಾಪಾರ..... ಈ ಅನುಭವದಲ್ಲಿ ಆಗುವುದು ಒಂದು ಬಗೆಯ ಸಂತೋಷ, ಅಸಂತೋಷಗಳ ಮಿಶ್ರಣ, ಅಸಂತೋಷ ಈ ಆಸೀಮವನ್ನು ಗ್ರಹಿಸಲಾರೆವಲ್ಲಾ ಎಂಬ ಕೊರಗಿನಿಂದ; ಸಂತೋಷ, ಇಂತಹ ಅಮೇಯವಾದುದನ್ನು ಕುರಿತು ನಾವು ಆಲೋಚಿಸಬಲ್ಲೆವಲ್ಲಾ ಎಂಬ ಹಿಗ್ಗಿನಿಂದ. ಹೀಗೆ ಕ್ಯಾಂಟನ ಪ್ರಕಾರ ಭವ್ಯತೆ ವ್ಯಕ್ತಿನಿಷ್ಠ, ವಸ್ತುವಿನಲ್ಲಿ ಭವ್ಯತೆ ಇಲ್ಲ; ಅದನ್ನು ಕುರಿತು ಆಲೋಚಿಸುವ ನಮ್ಮಲ್ಲಿದೆ ಎಂದ ಮೇಲೆ ನಮ್ಮಲ್ಲಿ ಭವ್ಯತೆಯನ್ನು ಉದ್ದೀಪಿಸಲು ವಸ್ತುವಿನಲ್ಲಿ ಯಾವ ಭವ್ಯ ಗುಣ ಇದೆ ಎನ್ನುವುದಕ್ಕೆ ಇವರಲ್ಲಿ ಉತ್ತರವಿಲ್ಲ. ಭವ್ಯತೆಯನ್ನು ನಮ್ಮಲ್ಲಿ ಜಾಗೃತಗೊಳಿಸುವ ವಸ್ತು ಮಹತ್ತಾಗಿಯೂ ಶಕ್ತಿಪೂರ್ಣವಾಗಿಯೂ ಇರಬೇಕು ಎಂದು ಮಾತ್ರ ಹೇಳುತ್ತಾನೆ.'

ಎ.ಸಿ.ಬ್ರಾಡ್ಲೆ&ಭವ್ಯತೆ:-ಭವ್ಯತೆ ಎನ್ನುವುದು ಹಿಂದಿನವರು ಭಾವಿಸಿದಂತೆ ಸೌಂದಯ್ಯದಿಂದ ಬೇರೆಯಾದುದಲ್ಲ. ಸೌಂದಯ್ಯದ ಒಂದು ವಿಶೇಷ ವಿನ್ಯಾಸ, ಈ ಅನುಭವ ಅತಿಶಯವಾದ ಅಪ್ರತಿಹತವಾದ ಮಹತ್ತಿನಲ್ಲಿದೆ. ಈ ಮಹತ್ತು ಬೃಹದ್ ಗುತ್ತದ ವಸ್ತುಗಳಿಂದ ಆಗುವಂತೆ, ಆತ್ಮದ ಮಹತ್ವನ್ನು ವ್ಯಕ್ತಗೊಳಿಸುವ 'ಅಲ್ಪ' ವಸ್ತುಗಳಿಂದಲೂ ಸಾಧ್ಯ,

ಎ.ಸಿ.ಬ್ರಾಡ್ಲೆ ಸಿದ್ಧಾಂತದ ಮುಖ್ಯಾಂಶಗಳು

೧. ಅತಿಶಯವಾದ ಗಾತ್ರ ಅಥವಾ ಶಕ್ತಿ

೨. ಮೊದಲನೆಯದಾಗಿ ಅದು ನಮ್ಮ ವ್ಯಕ್ತಿತ್ವವನ್ನು ಅಘಾತಗೈಯುವ ಅಥವಾ ದೂರಕ್ಕೆಸೆಯುವ ಒಂದು ನೇತ್ಯಾತ್ಮಕ ಸ್ಥಿತಿ.

೩. ಆದರೆ, ಕೂಡಲೆ ಒದಗುವ ಒಂದು ಬಗೆಯ ಆತ್ಮ ವಿಸ್ತಾರ ಅಥವಾ ಉತ್ಥಾನದಲ್ಲಿ ನಾವು ವಸ್ತುವಿನೊಂದಿಗೆ ಒಂದಾದೆವೆನ್ನುವಂತಹ ಸೌಂದರಾನುಭವ. ಇವುಗಳಲ್ಲಿ ಮೂರನೆಯ ಅಂಶ ಎಲ್ಲ ಭವ್ಯತೆಯ ಅನುಭವದಲ್ಲೂ ಇದ್ದು, ಸೌಂದರಾನುಭವವೆಲ್ಲದಕ್ಕೂ ಸಾಮಾನ್ಯವೆಂಬಂತೆ ತೋರುತ್ತದೆ.

ಡಾ.ಬಸ್ವಾಂಕೆ:- ಇದನ್ನು ಕ್ಲಿಷ್ಟ ಸೌಂದರ್ಯವೆಂದು ಕರೆದಿದ್ದಾರೆ.

ಇಲ್ಲಿ ನಮಗೊದಗುವ ಸಾಮರಸ್ಯಾನುಭವ ನಮ್ಮ ಅಹಂಕಾರವನ್ನು ಹಾಗೆಯೇ ಉಳಿಸುವುದರ ಮೂಲಕವಲ್ಲ; ಅದನ್ನು ಶೋಷಣೆಗೈಯುವುದರ ಮೂಲಕ ಭವ್ಯತೆಯಲ್ಲಿ ಮೊದಲು ನಮ್ಮನ್ನು ಆ ಅನುಭವ ಅಪ್ಪಳಿಸಿದರೂ, ಆಗ ಬೇರೊಂದು ಶಕ್ತಿ ನಮ್ಮನ್ನು ತುಂಬ ಮೇಲಕ್ಕೆತ್ತಿ ಆ ಮಹತ್ತನ್ನು ಅನುಭವಿಸುವ ಶಕ್ತಿಯನ್ನು ನೀಡುತ್ತದೆ.

ಎಸ್. ಅಲೆಗ್ಸಾಂಡರ್: "ಭವ್ಯತೆ ಮೊದಲು ನಮ್ಮ ಮನಸ್ಸನ್ನು ತಲ್ಲಣಗೊಳಿಸುತ್ತದೆ. ಆದರೆ ಅದನ್ನು ಸವಿಯುವ ಒಂದು ಸಮ್ಮತಿ ಮತ್ತು ಸಾಮರಸ್ಯ ಮನಸ್ಸಿಗೆ ಒದಗುವುದು ಅನಂತರ, ಬಿರುಗಾಳಿ ಭಯಂಕರವಾಗಿ ತೋರುವುದು ಭೀತನಿಗೆ ಮಾತ್ರ; ಆದರೆ ಅದನ್ನು ಒಲಿದು ನೋಡುವವನಿಗೆ ಅದು ಭವ್ಯ ಮತ್ತು ಶಕ್ತಿಪೂರ್ಣ, ಆದ್ದರಿಂದ ಭವ್ಯತೆ ಎಂದರೆ ನಮ್ಮನ್ನು ತಲ್ಲಣಗೊಳಿಸುವ ಸನ್ನಿವೇಶದಲ್ಲೂ ಅದರ ಭೂಮತೆಯನ್ನರಿಯುವ ಸಾಮರಸ್ಯ.... ಈ ಭವ್ಯತೆ ಒಂದು ರೀತಿಯಲ್ಲಿ ಕ್ಲಿಷ್ಟ ಸೌಂದರ್ಯ; ಆದರೆ ಎಲ್ಲ ಕ್ಲಿಷ್ಟ ಸೌಂದರ್ಯವೂ ಭವ್ಯವಲ್ಲ. ಈ ಕಾರಣದಿಂದ ಭವ್ಯತೆ ಎನ್ನುವುದು ಸೌಂದರ್ಯದ ಬೇರೆ ಒಂದು ರೂಪ" ಕುವೆಂಪು ರವರ ದೃಷ್ಟಿಯಲ್ಲಿ ಭವ್ಯ:-Sublime ಎನ್ನುವುದಕ್ಕೆ ಸಂವಾದಿಯಾಗಿ 'ಭವ್ಯತೆ' ಎಂಬ ಪದವನ್ನು ಕನ್ನಡದಲ್ಲಿ ಮೊಟ್ಟಮೊದಲು ಬಳಸಿ, ಸಾಹಿತ್ಯ ವಿಮರ್ಶೆಯಲ್ಲಿ ಆ ಪದದ ಅರ್ಥವ್ಯಾಪ್ತಿಯನ್ನು ನಿರ್ಣಯಿಸಿ ಪ್ರಯೋಗ ಮಾಡಿದವರು ಶ್ರೀ ಕುವೆಂಪು 'ಪಂಪನಲ್ಲಿ ಭವ್ಯತೆ' ಎಂಬ ಲೇಖನದಲ್ಲಿ ಅವರು ಭವ್ಯತೆ ಎನ್ನುವುದನ್ನು ಹೀಗೆ ಸೂತ್ರೀಕರಿಸಿದ್ದಾರೆ. "ಎಲ್ಲಿ ಸೌಂದರವು ಪರಿಮಿತದಲ್ಲಿ ವಿಹರಿಸುತ್ತದೆಯೋ ಅಲ್ಲಿ ಮೈದೋರುವುದು ಲಾಲಿತ್ಯ, ಎಲ್ಲಿ ಅದು ಅಪರಿಮಿತದಲ್ಲಿ ವಿಜೃಂಭಿಸಿ ವಿರಾಟ್ ಸ್ಪರ್ಶಿಯಾಗುತ್ತದೋ ಅಲ್ಲಿ ಹೊರಹೊಮ್ಮುವುದು ಭವ್ಯತೆ ಅಲ್ಪ ಕಟ್ಟಕ್ಕೆ ಯಾವ ಒಬರ್ಥವನ್ನೂ ಆರೋಪಿಸದೆ ಹೇಳುವುದಾದರೆ ಅಲ್ಲತೆ

ಲಾಲಿತ್ಯದ ಒಂದು ಲಕ್ಷಣ, ಭೂಮತೆ ಭವ್ಯತೆಯ ಲಕ್ಷಣ... "ಲಾಲಿತ್ಯ ನಮ್ಮ ಅಹಂಕಾರಕ್ಕೆ ಎಷ್ಟರಮಟ್ಟಿಗೆ ಪರಿಪೋಷಕವಾಗುತ್ತದೆಯೋ ಅದಕ್ಕಿಂತಲೂ ಮಹತ್ತರವಾಗಿ ನಮ್ಮ ಪ್ರತ್ಯೇಕತೆಗೆ ವಿಧ್ವಂಸಕವಾಗುತ್ತದೆ ಭವ್ಯತೆ, ಭವ್ಯವಾದುದರ ಮುಂದೆ ನಮ್ಮ ವ್ಯಕ್ತಿತ್ವ ತತ್ತರಿಸುತ್ತದೆ. ಅಲ್ಲಿ ಸೌಂದರ್ಯ ಮಹತೋಮಹೀಯವಾಗಿ ನಮ್ಮ ಬುದ್ಧಿಯನ್ನು ಸೋಲಿಸಿ ಕಲ್ಪನೆಯನ್ನು ಹಿಂತಳ್ಳಿ ಭಾವವನ್ನು ಮೀರಿ ನಮ್ಮನ್ನು ಬ್ರಹ್ಮದತ್ತಣ್ಗೆ ಬೀಸಿ ಎಸೆಯುತ್ತದೆ.........ಯಾವ ಸೌಂದರ್ಯ ಪ್ರಕೃತಿಯದಾಗಲಿ ಕಲಾಕೃತಿಯದಾಗಲಿ ದರ್ಶನ ಪ್ರಾರಂಭದಲ್ಲಿ ವ್ಯಕ್ತಿತೆಯನ್ನು ಅಪ್ಪಳಿಸಿದರೂ ತರುವಾಯ ಭೂಮಕ್ಕೆ ಕುಪ್ಪಳಿಸುವಂತೆ ಅದಕ್ಕೆ ಸಹಾಯಮಾಡುವುದೋ ಅದನ್ನು ಭವ್ಯವೆಂದು ವರ್ಣಿಸುತ್ತೇವೆ?!-ತಪೋನಂದನ "ಭವ್ಯತೆಯನ್ನು ತಕ್ಕ ಪ್ರಮಾಣದಲ್ಲಿ ಹೊರ ಹೊಮ್ಮಿದ ಯಾವ ಕವಿಯೂ ಮಹಾಕವಿಯಾಗಲಾರನು; ಯಾವ ಕಾವ್ಯವೂ ನಿತ್ಯನೂತನವಾಗಲಾರದು."

ಭವ್ಯತಾನುಭವ ಹಾಗೂ ಸೌಂದರ್ಯದ ಲಕ್ಷಣಗಳು ಭವ್ಯತೆಯ ಅನುಭವದಲ್ಲಿ ಪ್ರಧಾನವಾದುದು ಮಹತ್ತು, ಅಪ್ರತಿಹತವಾದ ಮಹತ್ತು.

ಅದು ಯಾವ ವಸ್ತುವಿನ ಮೂಲಕವಾದರೂ ಬರಲಿ, ಅನಂತತೆಯ ಕಡೆಗೆ ನಮ್ಮನ್ನು ಎತ್ತಿದರೆ ಸಾಕು.

ಮೊದಲು ಒಂದು ಬಗೆಯ ಆಘಾತ; ಅನಂತರ ಉತ್ಥಾನದ ಮೂಲಕ ವಸ್ತುಭಾವದೊಂದಿಗೆ ಪಡೆಯುವ ಸಾಮರಸ್ಯಾನುಭವದ ಆನಂದ.

ಭವ್ಯತಾ ಅನುಭವದಲ್ಲಿ ಮೊದಲೊದಗುವ ಆಘಾತದಲ್ಲಿ ಒಂದು ಬಗೆಯ ಭಯಾನುಭವವಾಗುವುದಾದರೂ, ಅದು ವಾಸ್ತವವಾಗಿ 'ಭಯವಲ್ಲದ ಭೀತಿ, ಎಡ್ಮಂಡ್ ಬರ್ಕನಂತೆ ಇಲ್ಲಿ ಆಗುವ ಆಘಾತ ಭಯದಿಂದ ಆದುದಲ್ಲ, ಸೌಂದರ್ಯದ ಮಹತ್ತಿನಿಂದ ಆದುದು. ಭವ್ಯತೆಯ ಅನುಭವದಲ್ಲಿ ಭಯದ ಅಂಶವಿದ್ದರೂ ಎಲ್ಲ ಭಯಾನುಭವವೂ ಭವ್ಯಾನುಭವವಲ್ಲ, ಭವ್ಯಾನುಭವದ 'ಭಯ'ವೂ ಸೌಂದರಾನುಭವದ ಒಂದು ಸ್ಥಿತಿ, ಕ್ಯಾಂಟ್ ಭಾವಿಸಿದಂತೆ ಇದು ಕೇವಲ ವ್ಯಕ್ತಿ ನಿಷ್ಠವಲ್ಲ. ವಸ್ತುವಿನಲ್ಲೂ ಭವ್ಯತೆಯನ್ನು ಪ್ರಚೋದಿಸುವ ಮಹತ್ತು ಉಂಟು. ವ್ಯಕ್ತಿಯಲ್ಲೂ ಆ ಮಹತ್ತನ್ನು ಅನುಭವಿಸುವ ಸಾಮರ್ಥ್ಯವೂ ಇರಬೇಕು. ಈ ಕಾರಣದಿಂದಲೇ ವ್ಯಕ್ತಿ ವ್ಯಕ್ತಿಯ ಸೌಂದರಾನುಭವದಲ್ಲೂ ಏರಿಳಿತಗಳಿರುವಂತೆ ಈ ಅನುಭವದಲ್ಲೂ ಏರಿಳಿತಗಳನ್ನು ಗುರುತಿಸಬಹುದು. ಈ ಅನುಭವಕ್ಕೆ ಒಂದು ವ್ಯಕ್ತಿನಿಷ್ಠವಾದ ವಿಶೇಷ ಸಾಮರ್ಥ್ಯ ಬೇಕು. ಏಕೆಂದರೆ ಇದು ಸೌಂದರಾನುಭವದ ಶಿಖರಸಿದ್ಧಿ. ಇದರ ಅನುಭವ ಸರಳವಾದ ಸೌಂದರಾನುಭವದಷ್ಟು ಸುಲಭಸಾಧ್ಯವಲ್ಲದುದರಿಂದ ಹಲವರು ಇದನ್ನು ಕ್ಲಿಷ್ಟ ಸೌಂದರ್ಯವೆಂದು ಕರೆದರು. ಆದರೆ ಹಲವರು ಭಾವಿಸಿದಂತೆ ಭವ್ಯತೆ 'ಸೌಂದರ್ಯಾನುಭವ'ದಿಂದ ಅನ್ಯವಾದುದಾಗಲೀ ವಿರುದ್ಧವಾದುದಾಗಲೀ ಅಲ್ಲ. ಸೌಂದರ್ಯಾನುಭವಕ್ಕೂ, ಭವ್ಯತಾ ಅನುಭವಕ್ಕೂ ಪರಿಣಾಮ ತೀವ್ರತೆಯಲ್ಲಿ ಗುರುತಿಸಬಹುದಾದಂತಹ ವ್ಯತ್ಯಾಸ ಇರುವುದಾದರೂ, ಸೌಂದರ್ಯವೂ ಭವ್ಯತೆಯಂತೆ ಅನಂತತೆಯ ಪ್ರತಿಮೆಯೇ. "ಸೌಂದರ್ಯವೆಂದರೆ ಸಾಧ್ಯವಾಗಬಹುದಾದ ಸಾಂತತೆಯಲ್ಲಿ ಮೈದೋರುವ ಅನಂತತೆಯ ಪ್ರತಿಮೆ ಎನ್ನುವುದಾದರೆ, ಭವ್ಯತೆ ಅದೇ ಅನಂತತೆಯ ಅಸೀಮ ಪ್ರತಿಮೆ ಎನ್ನಬಹುದು."

ಸುಂದರಕ್ಕೆ ಉದಾ:-

ಗಿಡಗರುಕೆ ಹಸುರಿನಲ್ಲಿ ಕೆನೆ ಹಾಲಿನ ಬಟ್ಟಲು; ಹೂವೆನ್ನುವ ಹೆಸರಿನಲ್ಲಿ ಬೆಟ್ಟಿಂಗಳ ತೊಟ್ಟಿಲು-ಅಗ್ನಿಹಂಸ-ನಮ್ಮ ವ್ಯಕ್ತಿತತವಕ್ಕೆ ಯಾವ ಆಘಾತವೂ ಆಗದಂತಹ ಸ್ಥಿತಿ.

ಭವ್ಯತಾನುಭವದ ಸಾಧನೆಯ ಎರಡು ಪಕ್ಷಗಳು

1. ಅಹಂಕಾರ ನಷ್ಟ
2. ಬ್ರಹ್ಮ ಲಾಭ

ಭವ್ಯತೆ: ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಬಳಕೆಯಾಗುವ ಸಬ್ ಲೈಮ್ ಎಂಬ ಮಾತಿಗೆ ಸಂವಾದಿಯಾಗಿ 'ಭವ್ಯತೆ' ಎಂಬ ಮಾತನ್ನು ಬಳಸಲಾಗುತ್ತಿದೆ.

ಕನ್ನಡದ ಸಂದರ್ಭದಲ್ಲಿ ಈ ಮಾತನ್ನು ಮೊದಲು ಟಂಕಿಸಿ, ವಿವರಿಸಿದವರು ಕುವೆಂಪು ಅವರು, ಲಾಂಗಿನಸ್ಸ ಎಂಬ ರೋಮನ್ ಸಾಹಿತ್ಯ ಮೀಮಾಂಸಕನದೆಂದು ಹೇಳಲಾದ ಆನ್ ಸಬ್‌ಲೈಮ್ ಕೃತಿಯಲ್ಲಿ ಕಾವ್ಯದಿಂದ ಒದಗುವ ಸೌಂದರಾನುಭವದ ಒಂದು ಉನ್ನತ ಸ್ಥಿತಿಯನ್ನು ಸಬ್‌ಲೈಮ್ ಎಂದು ಹೇಳಲಾಗಿದೆ.

ಸಬ್‌ಲೈಮ್ ಅಥವಾ ಭವ್ಯತೆ ಎಂಬುದು ಭಾಷೆಯಲ್ಲಿರಬೇಕಾದ ಭವ್ಯತೆ ಬಗೆಯ ಶಕ್ತಿ ಮತ್ತು ಪರಿಪೂರ್ಣತೆ.

ಇದು ಓದುಗನನ್ನು ಅಪ್ರತಿಹತವಾದ ಶಕ್ತಿಯಿಂದ ಆಕ್ರಮಿಸಿ ಗೆಲ್ಲುತ್ತದೆ; ಅವನನ್ನು ಕೇವಲ ಸಮಾಧಾನಗೊಳಿಸದೆ ಅವನನ್ನು ಪರಿವರ್ತಿಸುತ್ತದೆ, ಮೇಲೆತ್ತುತ್ತದೆ.

ಲಾಂಗಿನಸ್ ಆ ಪ್ರಕಾರ ಈ ಭವ್ಯತೆ ಎಂಬುದು ಸಾಹಿತ್ಯಕೃತಿಗಳಲ್ಲಿ ಸಾಧಿತವಾಗುವ ಐದು ಬಗೆಗಳನ್ನು ಸೂಚಿಸುತ್ತಾನೆ.

1. ಮಹೋನ್ನತ ಭಾವಗಳನ್ನು ರೂಪಿಸುವುದು. Great thoughts. (grandeur of thought)
2. ಪ್ರಬಲವಾದ ರಾಗಗಳ ಪ್ರಚೋದನೆ, strong emotions
3. ಗಂಭೀರವಾದ ಪದ ರಚನೆ. noble diction ಶಬ್ದ ಮತ್ತು ಅರ್ಥಾಲಂಕಾರ- ಯೋಜನೆ certain figures of thought and speech,ಅಲಂಕಾರ ನಿರ್ಮಾಣ/ ಅರ್ಥಾಲಂಕಾರ ಮತ್ತು ಶಬ್ದಾಲಂಕಾರಗಳು
4. ಅತಿಶಯವಾದ ಬಂಧ. and dignified word arrangement".

ಮುಂದಿನ ಹಲವು ಸಾಹಿತ್ಯ ಮೀಮಾಂಸಕರು ಚರ್ಚೆಯನ್ನು ಮುಂದುವರಿಸಿದ್ದಾರೆ.

ಡಿ ಅಡಿಸನ್ನನು:- `ಭವ್ಯತೆ'ಯನ್ನು ಸೂಚಿಸಲು ಗ್ರಾಂಡ್ ಎಂಬ ಪದವನ್ನು ಬಳಸಿದನು.

ಎಡ್ಮಂಡ್ ಬರ್ಕನ:- 'ಯಾವುದು ಯಾವ ವಿಧದಿಂದಲಾದರೂ ವೇದನೆಯ ಮತ್ತು ಅಪಾಯದ ಭಾವನೆಯನ್ನು ಪ್ರಚೋದಿಸುತ್ತದೆಯೋ, ಎಂದರೆ ಯಾವುದು ಯಾವ ರೂಪದಲ್ಲಿಯಾದರೂ ಭಯೋತ್ಪಾದಕವೋ ಅಥವಾ ಅದಕ್ಕೆ ಸಂಬಂಧಪಟ್ಟುದೋ ಅಥವಾ ಭಯಕ್ಕೆ ಸಂವಾದಿಯಾದ ರೂಪದಲ್ಲಿ ವರ್ತಿಸುತ್ತದೆಯೋ ಅದು ಭವ್ಯತೆಯ ಉಗಮಕ್ಕೆ ಕಾರಣ', ಭಯದ ಅನುಭವ ಭವ್ಯತೆಗೆ ಕಾರಣವಾಗುವುದು ಹೇಗೆಂದರೆ ಭಯವನ್ನುಂಟು ಮಾಡುವ ವಸ್ತುಗಳಿಂದ ಒದಗುವ ಅಪಾಯಗಳಿಂದ ನಮ್ಮ ಮನಸ್ಸು ದೂರವಿರುತ್ತದೆ. ಹಾಗಾಗಿ ಮನಸ್ಸು ವಸ್ತುವಿನಿಂದ ದೂರಸರಿದು ನಿಲ್ಲಬಲ್ಲುದು.

ಬರ್ಕನು ಮುಂದುವರಿದು ಭವ್ಯತೆಯ ಈ ಅನುಭವಕ್ಕೆ ಅಸ್ಪಷ್ಟತೆಯೂ ಅಗತ್ಯವೆಂದು ಹೇಳುತ್ತಾನೆ.

ಮುಂದಿನ ಕೆಲವರು ಭವ್ಯತೆಯನ್ನು ಅನುಭವಿಸಲು ಕೇವಲ ಇಂದ್ರಿಯಗಳ ನೆರವು ಸಾಲದೆನ್ನುತ್ತಾರೆ. ಅಂದರೆ ಇದೊಂದು ಇಂದ್ರಿಯಾತೀತ ಅನುಭವವೆಂದು ಅವರ ನಿಲುವು. ಭವ್ಯತೆಯ. ಅನುಭವ ಇಂಥದೆಂದು ಹೇಳಲಾಗದೆ ಹೋಗುವುದುದರಿಂದ ಅದೊಂದು ನೇತ್ಯಾತ್ಮಕ ಅನುಭವವೆಂದು ಕಾಂಟನು ಎರಡು ಬಗೆಯ ಭವ್ಯತಾನುಭವಗಳನ್ನು ಸೂಚಿಸುತ್ತಾನೆ.

1. ಗಣಿತಾತ್ಮಕ
2. ಶಕ್ತಾತ್ಮಕ,

ಕಾಂಟನೇ ಮುಂದುವರಿದು ಭವ್ಯತೆ ಎಂಬುದು ವಸ್ತುವಿನಲ್ಲಿರದೆ ನೋಡುವ ಮನಸ್ಸಿನಲ್ಲಿದೆ ಎಂದು ಹೇಳುತ್ತಾನೆ.

ಈ ಅನುಭವದಲ್ಲಿ ಆಗುವುದು ಒಂದು ಬಗೆಯ ಸಂತೋಷ ಅಸಂತೋಷಗಳ ಮಿಶ್ರಣ, ಸಂತೋಷ, ಇಂತಹ

ಅಮೇಯಯವಾದುದನ್ನು ನಾವು ಆಲೋಚಿಸಲಬಲ್ಲೆವಲ್ಲಾ ಎಂಬ ಹಿಗ್ಗಿನಿಂದ ಅಸಂತೋಷ ಈ ಅಸೀಮವನ್ನು ಗ್ರಹಿಸಲಾರೆವಲ್ಲ ಎಂಬ ಕೊರಗಿನಿಂದ ಆಧುನಿಕರಲ್ಲಿ ಬ್ರಾಡ್ಲೆಯವರು ಭವ್ಯತೆಯು ವ್ಯಕ್ತವಾಗಲು ಬೇಕಾದ ನಾಲ್ಕು ಅಂಶಗಳನ್ನು ಹೇಳಿದ್ದಾರೆ.

1. ಅತಿಶಯವಾದ ಗಾತ್ರ ಅಥವಾ ಶಕ್ತಿ
2. ನಮ್ಮ ವ್ಯಕ್ತಿತ್ವವನ್ನು ಆಘಾತಗೈಯುವ ಅಥವಾ ದೂರಕ್ಕೆಸೆಯುವ ಒಂದು ನೇತ್ಯಾತ್ಮಕ ಸ್ಥಿತಿ.
3. ಆದರೆ ಜತೆಗೆ ಒದಗುವ ಒಂದು ಬಗೆಯ ಆತ್ಮವಿಸ್ತಾರ ಅಥವಾ ನಾವು ವಸ್ತುವಿನೊಂದಿಗೆ ಒಂದಾದೆವೆನ್ನುವ ಸೌಂದರಾನುಭವ.

೦೪) ಭವ್ಯತೆ ಮನಸ್ಸನ್ನು ತಲ್ಲಣಗೊಳಿಸಿದರೂ, ತದನಂತರ ಒದಗುವ ಸಮಸ್ಥಿತಿ ಮತ್ತು ಸಾಮರಸ್ಯದಿಂದ ಮನಸ್ಸು ಶಕ್ತವಾಗುತ್ತದೆ. ಆದ್ದರಿಂದ ಭವ್ಯತೆ ಒಂದು ರೀತಿಯಲ್ಲಿ, ಬಸಾಂಕ್ವೆ ಪ್ರಕಾರ ಕ್ಲಿಷ್ಟ ಸೌಂದರ್ಯ. ಆದರೆ ಎಲ್ಲ ಕ್ಲಿಷ್ಟ ಸೌಂದರ್ಯವೂ ಭವ್ಯವಲ್ಲ.

ಪಾಶ್ಚಾತ್ಯರ ಈ ವಿಚಾರಧಾರೆ ಕಲಾನುಭವ ಮತ್ತು ಲೋಕಾನುಭವಗಳೆರಡರಲ್ಲೂ ಒದಗುವ ವಿಶಿಷ್ಟ ಬಗೆಯೊಂದನ್ನು ಗಮನಿಸುತ್ತಿದೆ. ಎಂದರೆ ಭವ್ಯತಾನುಭವ ಕೇವಲ ಕಲೆಗಳಿಂದ ಮಾತ್ರ ಒದಗುವಂಥದಲ್ಲ.

ಭಾರತೀಯ ಕಾವ್ಯಮೀಮಾಂಸಕರಲ್ಲಿ ಭವ್ಯತೆಗೆ ಸಂವಾದಿಯಾದ ಪರಿಕಲ್ಪನೆ ಇಲ್ಲ. ಆದರೆ ಕವಿಗಳು ಭವ್ಯತಾನುಭವವನ್ನು ಪಡೆದಿಲ್ಲವೆಂದಾಗಲೀ ಅಂಥ ಅನುಭವವನ್ನು ನೀಡಬಲ್ಲ ಕಾವ್ಯಭಾಗಗಳನ್ನು ರಚಿಸಿಲ್ಲವೆಂದಾಗಲೀ ಅಲ್ಲ. ಆದರೆ ಕಾವ್ಯ ಮೀಮಾಂಸೆಯಲ್ಲಿ ಅಂಥ ಅನುಭವವನ್ನು ಪ್ರತ್ಯೇಕವಾಗಿ ಚರ್ಚಿಸಿಲ್ಲ.

ಅದ್ಭುತ ರಸದ ಅನುಭವದಲ್ಲೇ ಇದೂ ಅಂತರ್ಗತವಾಗುವುದೆಂದು ತಿಳಿದಿರಲೂಬಹುದು. ಅದ್ಭುತದ ಸ್ಥಾಯಿ 'ವಿಸ್ಮಯ'.

ವಿಸ್ಮಯದಲ್ಲಿ ವ್ಯಕ್ತಿತ್ವವನ್ನು ತತ್ತರಿಸುವಂತೆ ಮಾಡುವ ಅಂಶವಿಲ್ಲವೆನ್ನಬೇಕಾಗುತ್ತದೆ.

ಆದರೆ ಭವ್ಯತಾನುಭವದಲ್ಲಿ ವಿಸ್ಮಯವೂ ಒಂದು ಅಂಗ. ಹೀಗಾಗಿ ಭವ್ಯತೆಯು ಅದ್ಭುತರಸದ ಪರಿಕಲ್ಪನೆಯನ್ನು ಒಳಗೊಂಡಂತೆ ವಿಸ್ತಾರಗೊಳ್ಳುತ್ತದೆ ಎನ್ನಬೇಕು. 'ಭವ್ಯತೆ' ಎಂಬುದಕ್ಕೆ ಬದಲಾಗಿ 'ಮಹೋನ್ನತಿ' ಎಂಬ ಮಾತನ್ನು ಕನ್ನಡದಲ್ಲಿ ಅಲ್ಲಲ್ಲಿ ಬಳಸಲಾಗಿದೆ.

ವಿವರ: ಜಿ.ಎಸ್. ಶಿವರುದ್ರಪ್ಪ, ಸೌಂದರ ಸಮೀಕ್ಷೆ, 1970, 1965 ಪು 386–398 ಪೆರಿಹುಪ್ಸಾಸ್ ಕೃತಿಯ ಅನುವಾದಗಳು- ಮೊದಲ ಇಂಗ್ಲಿಶ್ ಅನುವಾದ of the height of Eloquence 2008. Of the loftiness or Elegancey of Speech ಆಯಿತು. ಕೊನೆಗೆ On the Sublime ಎಂದು ಉಳಿಸಿಕೊಳ್ಳಲಾಗಿದೆ.

ಕೃತಿಯ ಮೂಲ ಉದ್ದೇಶ- ಶೈಲಿಯ ಚರ್ಚೆ ಲಾಂಜಿನಸ್‌ನ ಕೃತಿ- ಪೆರಿಹಿಪ್ ಸೋಸ್/ಪೆರಿಹುಪ್ಸಾಸ್ (ಗ್ರೀಕ್)> on the sublime (ಇಂಗ್ಲಿಶ್)/ಭವ್ಯತೆಯ ಬಗ್ಗೆ ಪೆರಿಹುಪ್ಸಾಸ್- ಕಾವ್ಯಮೀಮಾಂಸೆ ಬಗ್ಗೆ ಬರೆದ ಕೃತಿಯಲ್ಲ.ಭಾಷಣಕಲೆಯ ಕೃತಿ ಭಾಷಣಕಲೆ, ಉತ್ತಮ ವಾಗ್ಮಿಯ ಭಾಷಾಶೈಲಿ ಕುರಿತು ಮಾತಾಡುವ ಕೃತಿ- ಲಾಂಜಿನಸ್‌ನ 'ಆನ್ ದಿ ಸೈಪ್ಲೈಮ್' ಲಾಂಜಿನಸ್ ತನ್ನ ಮಿತ್ರ/ಶಿಷ್ಯನಾಗಿದ್ದ ಟೆರೆನ್ಸಿಯೇನಸ್ ಎಂಬುವವನ ಸಲಹೆಯಂತೆ ಸಿಸಿಲಿಯಸ್ ನ ವಿಚಾರಗಳನ್ನು ಖಂಡಿಸಲು ಪ್ರಬಂಧಗಳನ್ನು ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ.

ಲಾಂಜಿನಸ್‌ನ 'ಆನ್ ದಿ ಸೈಭುಮ್' ಕೃತಿಯಲ್ಲಿ 44 ಅಧ್ಯಾಯಗಳಿವೆ.

ಭವ್ಯತೆ ಉನ್ನತ ಮನಸ್ಸಿನ ಪ್ರತಿಧ್ವನಿ the echo of greatness of spirit,- ಲಾಂಜಿನಸ್ ಸಹಜತೆಯೇ ಭವ್ಯತೆಯ ಮೂಲ. ಕೃತಕ ಅಥವಾ ಪಾಂಡಿತ್ಯಪೂರ್ಣ ಪ್ರತಿಮೆಗಳು ಹಾಗೂ ಅಲಂಕಾರಗಳು ಭವ್ಯತೆಯನ್ನು ದೂರ ತಳ್ಳುತ್ತವೆ- ಲಾಂಜಿನಸ್ ಸುಂದರ ಪದಗಳು ಚಿಂತನೆಯ ವಿಶಿಷ್ಟ ಕಾಂತಿಯೇ ಸರಿ- ಲಾಂಜಿನಸ್ ಭವ್ಯತೆ ಮೃತ ವಸ್ತುಗಳಿಗೂ ಪ್ರಾಣ ತುಂಬುತ್ತದೆ- ಲಾಂಜಿನಸ್ ಒಂದು ಕೃತಿ ಸಾವಯವ ಸಂಬಂಧವನ್ನು ಹೊಂದಿದ್ದರೆ ಮಾತ್ರ ಆ ಕೃತಿ ಭವ್ಯವಾಗಿರುತ್ತದೆ- ಲಾಂಜಿನಸ್ ಭ್ರಷ್ಟ ಸಮಾಜದಲ್ಲಿ ಭವ್ಯತೆ ಸೃಷ್ಟಿಯಾಗಲು ಸಾಧ್ಯವೇ ಇಲ್ಲ- ಲಾಂಜಿನಸ್ ಲಾಂಜಿನಸನ ಭವ್ಯತೆ ಸಂಪೂರ್ಣವಾಗಿ ವ್ಯಕ್ತಿನಿಷ್ಠ ಪರಿಕಲ್ಪನೆ.

ವೈದರ್ಭೀ, ಗೌಡಿ ಮತ್ತು ಪಾಂಚಾಲೀ ಎಂಬ 3 ರೀತಿಗಳನ್ನು ಹೇಳುವ ರೀತಿ ಪ್ರಸ್ಥಾನ'ದ ಮೂಲ ನಿಲುವನ್ನು ಭವ್ಯತೆ ಪರಿಕಲ್ಪನೆ ಹೋಲುತ್ತದೆ.

ಲಾಂಜಿನಸನ ಭವ್ಯ ಅಭಿವ್ಯಕ್ತಿ (Sublime Expression) ಯನ್ನು ಹೋಲುವ ಭಾರತೀಯ ಕಾವ್ಯ ಮೀಮಾಂಸೆಯ 'ರೀತಿ'- ವೈದರ್ಭೀ ಲಾಂಜಿನಸನ ವಿಮರ್ಶಾ ಮಾರ್ಗವು ಪರಿಣಾಮ ಕೇಂದ್ರಿತ ವಿಮರ್ಶೆ (AffectiveCriticism)-ಪ್ರಥಮ ತೌಲನಿಕ ವಿಮರ್ಶಕ ಹಾಗೂ ಪ್ರಥಮ ಶೈಲಿಶಾಸ್ತ್ರಜ್ಞ ಲಾಂಜಿನಸ್ ಶೈಲಿಯ ಸ್ವರೂಪವನ್ನು ಕುರಿತ ಒಂದು ಸ್ವತಂತ್ರ ಶಕ್ತಿ ಕ್ರಿ.ಶ. 3ನೇ ಶತಮಾನದಲ್ಲಿ ರೂಪುಗೊಂಡಿತು. ಅದೇ- 'ಪೆರಿಹುಪ್ಸಾಸ್' (Peri Hupsous)-ರೋಮ್‌ನಲ್ಲಿ ವಾಸವಾಗಿದ್ದ ಲಾಂಜಿನಸ್ ಬರೆದದ್ದು – ಗ್ರೀಕ್ ಭಾಷೆಯಲ್ಲಿ-The effect of elevated language upon an audience is not pursuation but transport- ಶೈಲಿಯ ಮಹೋನ್ನತಿಯನ್ನು ನಿರ್ಧರಿಸುವುದು ಕವಿಯ ಆಂತರಂಗಿಕ ಅನುಭವ-ಲಾಂಜಿನಸ್-ಕವಿತೆಗೆ ಕಾರಣವಾದ ಎರಡು ಶಕ್ತಿಗಳು: Native Genius ಮತ್ತು Acquired Art ಕರೆದವನು-ಲಾಂಜಿನಸ್ ಲಾಂಜಿನಸ್ ನ ಹೇಳಿಕೆಗಳು ಪದಗುಚ್ಛಗಳ ಸರ್ವೋತ್ಕೃಷ್ಟತೆ ಮತ್ತು ಪರಿಪೂರ್ಣ ಹೊಂದಾಣಿಕೆಯೇ ಮಹೋನ್ನತಿ.

ಭಾವೋದ್ರೇಕದ ವಾಗ್ಮಿತೆಯನ್ನು ಮತ್ತಾವುದೂ ಸರಿಗಟ್ಟದು, ಉಚಿತ ಜಾಗದಲ್ಲಿ ಅದು ಬಂದರೆ ಅದರ ಉನ್ಮಾತಾವೇಶ ಉಕ್ತಿಯಲ್ಲಿ ತುಂಬಿಕೊಂಡು ದೈವಪ್ರೇರಣೆಯ ಕಣಿ ವಚನದಂತಾಗುತ್ತದೆ.

ಆಷಣಣ ಅಲಂಕಾರವೆಂದು ತೋರದಿರುವುದೇ ಉತ್ತಮ ಕಾವ್ಯಾಲಂಕಾರ, 'ಸುಂದರ ಶಬ್ದಗಳು ಮನಸ್ಸಿನ ನೈಜ ವಿಶಿಷ್ಟ ಪ್ರಭೆ, ಯಾರ ಮನೋಧರ್ಮ ಅತಿ ಶ್ರೇಷ್ಠವೂ ಅವರಲ್ಲಿ ದೋಷರಾಹಿತ್ಯ ಕಡಿಮೆ. ಮಹೋನ್ನತಿ ಅದರ ಲೇಖಕರನ್ನು ಭಗವಂತನ ಸರ್ವಶಕ್ತ ಚಿತ್ರದ ಹತ್ತಿರಕ್ಕೆ ಕೊಂಡೊಯ್ಯುತ್ತದೆ.'

ಭವ್ಯತೆಯ & ಸೌಂದರ್ಯದ ಕುರಿತ ಕಾಂಟ್ ನ ವಿಚಾರಗಳು

ಸೌಂದರ್ಯ ಎನ್ನುವುದು ಪರಿಮಿತವಾದ ಮತ್ತು ಒಂದು ನಿರ್ದಿಷ್ಟವಾದ ಆಕೃತಿಗಳಿಗೆ ಸಂಬಂಧಿಸಿದ್ದು, ಭವ್ಯತೆ ಅಸೀಮತೆಗೆ, ಆಕಾರರಾಹಿತ್ಯತೆಗೆ ಸಂಬಂಧಿಸಿದ್ದು....

ಭವ್ಯತೆಯ ಮುಖ್ಯ ಲಕ್ಷಣ ನಮ್ಮ ನಿರ್ಣಾಯಕ ಶಕ್ತಿಯನ್ನು ತಡೆದು, ನಮ್ಮನ್ನು ಅಪ್ಪಳಿಸುವುದು, ಅದು ನಮ್ಮ ಚೈತನ್ಯದ ಮೂಲವನ್ನೇ ಅಲ್ಲಾಡಿಸಿ ನಮ್ಮನ್ನು ಎತ್ತಿ ಎಸೆಯುತ್ತದೆ. ಇಲ್ಲಿ ಆಗುವ ಅನುಭವ, ಸೌಂದರಾನುಭವದಂತೆ ಇತ್ಯಾತ್ಮಕವಾದುದಲ್ಲ; ನೇತಾತ್ಮವಾದುದು. ಈ ಬಗೆಯ ನೇತ್ಯಾತ್ಮಕಾನಂದರೂಪಿಯಾದ ಈ ಭವ್ಯಾ ಅನುಭವ, ಗಣಿತಾತ್ಮಕ (Mathematical) ಎಂದರೆ, ಸಾಮಗ್ರ್ಯತಾ ಭಾವದಿಂದ ಉದ್ದೀಪನಗೊಳ್ಳುವ ಮತ್ತು ಶಕ್ತಾತ್ಮಕ (Dynamic) ವಸ್ತುಗಳಿಂದ ಉಂಟಾಗುತ್ತದೆ ಕ್ಯಾಂಟನ ಸೌಂದರಮೀಮಾಂಸೆಯು ವ್ಯಕ್ತಿನಿಷ್ಠ ದೃಷ್ಟಿಯ ಅಡಿಗಲ್ಲಿನ ಮೇಲೆ ನಿಂತಿರುವುದರಿಂದ, ಅವನ ಪ್ರಕಾರ ಈ ಭವ್ಯತೆ ವಸ್ತುವಿನಲ್ಲಿಲ್ಲ. ಯಾವಾಗ ಅವರು ಭವ್ಯತೆಯ ವಸ್ತು ಅಸೀಮ, ಅಮಿತ- ಎಂದು ಅಂಗೀಕರಿಸಿದನೋ ಆಗ ಈ ಲೋಕದ ವಸ್ತುಗಳಿಗೆ ಒಂದು ಮಿತಿ ಇರುವುದರಿಂದ ಹಾಗೂ ಪ್ರಕೃತಿ ಅನೇಕ ಆಕೃತಿಗಳ ಸಮೂಹವಾದುದರಿಂದ ಅವು ಭವ್ಯವಾಗಲಾರವು ಎಂದು ಅವನ ಅಭಿಪ್ರಾಯ. ಆದರೆ, ಅವು ಆಲೋಚನೆಯಲ್ಲಿ ಭವ್ಯವಾಗಬಲ್ಲ ವು.ಎನ್ನುತ್ತಾನೆ. ಕುದಿಗೊಂಡ ಕಡಲು ಭವ್ಯವಲ್ಲ: ಭಯಂಕರ, ಆದರೆ

ಮನಸ್ಸು ಅದನ್ನು ಚಿಂತಿಸಿ ಸೌಂದರಾನುಭವ ಮಾಡುವಾಗ ಅದು ಭವ್ಯವಾಗುತ್ತದೆ. ಕ್ಯಾಂಟನ ಪ್ರಕಾರ ಭವ್ಯತೆ ಎನ್ನುವುದು ಕೇವಲ ಮಹತ್ತಿಗೆ (Absolute greatness) ಮಾತ್ರ ಅನ್ವಯಿಸತಕ್ಕದ್ದು. ಕೇವಲ ಮಹತ್ತು ಎನ್ನುವುದು ಗ್ರಾಹ್ಯಮಹತ್ತಿಗೂ ಅತೀತ. ಎಲ್ಲ ನಿರ್ದಿಷ್ಟರೂಪಗಳನ್ನೂ ಅದು ಮೀರಿದುದು, ಕೇವಲ ಮಹತ್ತು ಅಪ್ರಮೇಯ, ಅಂತಹ ಅಪ್ರಮೇಯವಾದ ಮಹತ್ತು ಪ್ರಕೃತಿಯ ಎಲ್ಲ ಮಹತ್ತೂ ಸಾಪೇಕ್ಷ, ನಾಮರೂಪ ಲೋಕದ ಆಕೃತಿಗಳೆಲ್ಲ ಪರಿಮಿತವಾದುದರಿಂದ ಆ ಮಹೋನ್ನತಿಯನ್ನು ಅನುಭವಕ್ಕೆ ತರಲಾರವು. ಈ ಕಾರಣದಿಂದ ಭವ್ಯತೆ ಎನ್ನುವುದು ನಮ್ಮ ಅಂತರಂಗದ ವ್ಯಾಪಾರ..... ಈ ಅನುಭವದಲ್ಲಿ ಆಗುವುದು ಒಂದು ಬಗೆಯ ಸಂತೋಷ ಅಸಂತೋಷಗಳ ಮಿಶ್ರಣ, ಅಸಂತೋಷ:-ಈ ಅಸೀಮವನ್ನು ಗ್ರಹಿಸಲಾರೆವಲ್ಲಾ ಎಂಬ ಕೊರಗಿನಿಂದ; ಸಂತೋಷ:-ಇಂತಹ ಅಮೇಯವಾದುದನ್ನು ಕುರಿತು ನಾವು ಆಲೋಚಿಸಬಲ್ಲೆವಲ್ಲಾ ಎಂಬ ಹಿಗ್ಗಿನಿಂದ. ಹೀಗೆ ಕ್ಯಾಂಟನ ಪ್ರಕಾರ ಭವ್ಯತೆ ವ್ಯಕ್ತಿನಿಷ್ಠ. ವಸ್ತುವಿನಲ್ಲಿ ಭವ್ಯತೆ ಇಲ್ಲ; ಅದನ್ನು ಕುರಿತು ಆಲೋಚಿಸುವ ನಮ್ಮಲ್ಲಿದೆ ಎಂದ ಮೇಲೆ ನಮ್ಮಲ್ಲಿ ಭವ್ಯತೆಯನ್ನು ಉದ್ದೀಪಿಸಲು ವಸ್ತುವಿನಲ್ಲಿ ಯಾವ ಭವ್ಯ ಗುಣ ಇದೆ ಎನ್ನುವುದಕ್ಕೆ ಇವನಲ್ಲಿ ಉತ್ತರವಿಲ್ಲ. ಭವ್ಯತೆಯನ್ನು ನಮ್ಮಲ್ಲಿ ಜಾಗೃತಗೊಳಿಸುವ ವಸ್ತು ಮಹತ್ತಾಗಿಯೂ ಶಕ್ತಿಪೂರ್ಣವಾಗಿಯೂ ಇರಬೇಕು ಎಂದು ಮಾತ್ರಹೇಳುತ್ತಾನೆ.' ಕಾಂಟ್ ನು ಹೇಳಿದ sublimity ಗಳು

1. Mathamatical sublimity ಸಾಮಗ್ರ್ಯತಾಭಾವದಿಂದ ಉದ್ದೀಪನಗೊಳ್ಳುವ sublimity
2. Dynamic sublimity ಶಕ್ತ್ಯಾತ್ಮಕ ವಸ್ತುಗಳಿಂದ ಉಂಟಾಗುವ.sublimity.

ಕನ್ನಡ ಕಾವ್ಯ ಮತ್ತು ಮೀಮಾಂಸೆ ಕೃತಿಗಳಲ್ಲಿ ಭವ್ಯತೆ:-

ಪಂಪನ ಭವ್ಯ ಕಲ್ಪನೆ- ಇದು ಕಾಂಟ್ ನು ಹೇಳಿದ Mathamatical sublimity ಪಂಪನು ಆದಿಪುರಾಣದಲ್ಲಿ ಹಲವಾರು ಭವ್ಯ ಪ್ರಸಂಗಗಳನ್ನು ತಂದಿರುವನು. "ಇಂದ್ರನನ್ನೂ, ಜಿನಶಿಶುವನ್ನೂ ಹೊತ್ತು ಹೊರಟಿರುವ ಐರಾವತದ ವರ್ಣನೆ ಭವ್ಯವಾಗಿದೆ. ಹಿಮಾಲಯ ಪರ್ವತಕ್ಕಿಂತಲೂ ಹಿರಿದಾದ ಐರಾವತಕ್ಕೆ ಮೂವತ್ತೆರಡು ಮುಖಗಳಾಗಿವೆ. ಒಂದೊಂದು ಮುಖದಲ್ಲಿ ಎಂಟೆಂಟು ನೀಳವಾದ ಮತ್ತು ಬೆಳ್ಳಗಿನ ದಂತಗಳು ಮೂಡಿವೆ. ಆ ಒಂದೊಂದು ದಂತಿನ ಅಗ್ರಸ್ಥಾನದಲ್ಲಿ ಒಂದೊಂದು ಸರೋವರವು ನಿರ್ಮಾಣಗೊಂಡಿದೆ. ಒಂದೊಂದು ಸರೋವರದಲ್ಲಿ ಒಂದೊಂದೇ ಕಮಲ ಅರಳಿದೆ. ಆ ಒಂದೊಂದು ಕಮಲದಲ್ಲಿ ಮೂವತ್ತೆರಡು ದಳಗಳು ಕಂಗೊಳಿಸುತ್ತಲಿವೆ. ಒಂದೊಂದು ದಳದ ಮೇಲೆ ಮೂವತ್ತೆರಡು ದೇವಾಂಗನೆಯರು ನರ್ತಿಸುತ್ತಿದ್ದಾರೆ. ಮೆಟ್ಟಿದರೋ, ಮೆಟ್ಟರೊ ಎಂಬಂತೆ!"

"ನೆಗರ್ದೈರಾವತ ದಂತಿಗಾದುದು ಮೊಗಂ ಮೂವತ್ತೆರಳ್ ನೋಳ್ಪೊಡಾ ಮೊಗಮೊಂದೊಂದರೊಳೆಂಟು ಕೋಡವರೊಳಂತೊಂದೊಂದರೊಳ್ಪೊಗೊಳಂ ಗಳ್ವೊಂದೊಂದೆಸೆದಿರ್ಕುಮಾ ಕೊಳಗಳಂತೊಂದರೊಳ್ ಚಿತ್ರಪ ತ್ರಗಣಂ ಪದ್ಮಿನಿ ನಾಡೆ ಚೆಲ್ವನೊಳಕೊಂಡೊಂದೊಂದೆ ಕಣ್ಗೊಪ್ಪಗಪುಗುಂ- ಪೊಸಪೂವಬ್ಜಿನಿಯೊಂದರೊಳ್ ಸೊಗಯಿಕುಂ ಮೂವತ್ತೆರಳ್ಪೂವಿನೊಳ್ ಪೊಸಗಂಪಂ ಪುದಿದೊಪ್ಪಿ ತೋರುವೆಸಳ್ಗಳ್ ಮೂವತ್ತೆರಳ್ಚೆಲ್ವಿನ- ಪ್ಪೆಸಳೋರೊಂದರಮೇಲೆ ಲೀಲೆ ಮಿಗೆ ಮೂವರ್ತಿವ್ವರೋರಂತೆ ನ- ರ್ತಿಸೆ ದೇವಾಂಗನೆಯರ್ ಬೆಡಂಗನೊಳಕೊಂಡತ್ತಿಂದ್ರು ರುಂದ್ರುದ್ವಿಪಂ ಕಾಂಟ್ ನು ಹೇಳಿದ Dynamic sublimity ಕುಮಾರವ್ಯಾಸನ ಐರಾವತದ ವರ್ಣನೆ "ಜಗದ ನಿಡುನಿದ್ರೆಯಲಿ ಮೋಹರದೆಗೆದ ಮುಗಿಲೋ ಮೇಣಖಿಲ ಕುಲ ದಿಗಿಭವೆಂಟೊಂದಾಯ್ತು ಕೈಕಾಲ್ ಮೂಡಿತೋ ನಭಕೆ II ಅಗಿದು ಮೆಟ್ಟಿದೊಡವನಿ ಪಡುವಲು ನೆಗೆದುದಡರಿದು ಮುಂದೆ ಮಟ್ಟಲು! ಜಿಗಿದುದಿಳೆ ಮೂಡಲು ಮಹಾಗಜವೃದಿತಾಹವವ ||(ದ್ರೋಣ ಪರ್ವ, ೩೯) (ಇಲ್ಲಿನ ಮಹಾಗಜದ ಚಿತ್ರ ಭವ್ಯವಾಗಿದೆ. ಅದರಲ್ಲೂ 'ಕೈಕಾಲ್ ಮೂಡಿತೋ ನಭಕೆ' ಎನ್ನುವ ಒಂದು ಮಾತಿನಿಂದ ನಮ್ಮ ಕಲ್ಪನೆ ತತ್ತರಿಸುತ್ತದೆ. ನಭಕ್ಕೆ ಕೈಕಾಲ್ ಮೂಡಿದರೆ ಹೇಗಿರುತ್ತದೆಯೋ ಹಾಗಿತ್ತಂತೆ ಆ ಮಹಾಗಜ! ಆ ಮಹಾಗಜದ ಪದಾಘಾತಕ್ಕೆ ನೆಲವೇ ಮೂಡಲ ಪಡುವಲಕ್ಕೆ ಏರಿಳಿಯಿತಂತೆ.

ಕುವೆಂಪುರವರು ಚಿತ್ರಕಲೆಯಲ್ಲಿ ಕಾಣುವ ಭವ್ಯ ಕಲ್ಪನೆ ಕುವೆಂಪು ಅವರು ಅವರು ಕಲಾವಿದ ನಿಕೋಲಾಸ್ ರೋರಿಕ್ ನ ಚಿತ್ರವನ್ನು ನೋಡಿ, ಹೀಗೆ ಸ್ಪಂದಿಸುತ್ತಾರೆ:

"ನಿನ್ನ ದಿವ್ಯ ಕಲೆಯನು ಕಂಡೆಂ, ಕಂಡುದೆ ತಡಂ: ಸ್ಫುರಿಸಿತೆನ್ನೆದೆಗೆ ದಿವ್ಯಾಗ್ನಿ, ಪೂರ್ವಪರಿಚಿತ. ಭವ್ಯಮಂ ತೆಕ್ಕನೆಯ ಮತ್ತೆ ಸಂಧಿಸುತದರ ಗುರುತು ಹಿಡಿದಂತೆ ನಿನ್ನಗ್ನಿ ಕೃತಿಗಳ ಮಧ್ಯೆ ನಿಲ್ಲುತೆ, ತಪಂಗೈದೆ ನೆನ್ನಾತ್ಮಮುಂ ನಿನ್ನ ನೋಂಪಿಯ ಪರಂಜ್ಯೋತಿಯಿಂ ಜ್ವಾಲೆಯಪ್ಪಂತೆ ಹೈಮಾಚಲೀಯಮಾ ನಿನ್ನ ಕಲೆ! ಮನ್ನನಂ ತಾನಾಯ್ತು ಹೈಮಾಚಲಸ್ಪರ್ದಿ, ನಭಶ್ಚುಂಬಿ ರಸವಾರ್ಧಿಸಂಗಿ, ವಿಶ್ವವ್ಯಾಪಿ, ಬೃಹ್ಮಾಸ್ಮಿ ಕಲ್ಪನೆ ಅಲ್ಪಮಾತ್ರದಿಂ ಭೂಮಾನುಭೂತಿಯಿಂ ಮಂತ್ರಿಸಿ ಮಥಿಪುದಲ್ಲಿ."

ಕುವೆಂಪುರವರಲ್ಲಿ ಭವ್ಯತೆ "ಆರೋ ತೆಕ್ಕನೆ ತುಡುಕಿ ಬಾಯ್ ಮುಚ್ಚಿ ಹಿಡಿದಂತೆ ಮೌನ ಭಾವದಿ ಮಾತು ಮೂರ್ಛ ಹೋಗಿಹುದಿಲ್ಲಿ ಶ್ರೀ ಗೊಮ್ಮಟೇಶ್ವರನ ಭವ್ಯ ಸನ್ನಿಧಿಯಲ್ಲಿ! ಗಾಂಭೀರ-ಗೌರವದ ಹೊನಲು ಚಿತ್ತವನೊತ್ತಿ..........

ಭವ್ಯತಾ ಮುದ್ರೆಯನ್ನೊತ್ತಿದೀ ದಿವ್ಯಕಲೆ ದೈತ್ಯಕಲೆ! ಎದೆಯಿದ್ದರಿಲ್ಲಿ ನಗು ನೋಡುವಂ ಬತ್ತಲೆಗೆ ಕಿಲಕಿಲನೆ ನಗುವ ಓ ಲಘು ಹೃದಯಿ! ಎಳ್ಳು ನೀರಿಹುದಿಲ್ಲಿ ಹೀನತೆಗೆ, ನೀಚತೆಗೆ ಬೆಳೆ ನೀರು ಭವ್ಯತೆಗೆ: ದಿವ್ಯತೆಗೆ...'

(ಶ್ರವಣಬೆಳದ ಗೊಮಟೇಶ್ವರ ಸಾನಿಧ್ಯದಲ್ಲಿ)

ಆಧುನಿಕ ವಿದ್ವಾಂಸರ ಪ್ರಕಾರ ಭವ್ಯತೆ

ಏ.ಸಿ, ಬ್ರಾಡ್ಲೆ ಯವರ ಭವ್ಯತೆಯ ಬಗೆಗಿನ ವಿಚಾರಗಳು ಭವ್ಯತೆ ಎನ್ನುವುದು ಹಿಂದಿನವರು ಭಾವಿಸಿದಂತೆ ಸೌಂದರ್ಯ ದಿಂದ ಬೇರೆಯಾದುದಲ್ಲ. ಸೌಂದರ್ಯದ ಒಂದು ವಿಶೇಷ ವಿನ್ಯಾಸ, ಈ ಅನುಭವ ಅತಿಶಯವಾದ ಅಪ್ರತಿಹತವಾದ ಮಹತ್ತಿನಲ್ಲಿದೆ.

ಈ ಮಹತ್ತು ಬೃಹದ್ ಗಾತ್ರದ ವಸ್ತುಗಳಿಂದ ಆಗುವಂತೆ, ಆತ್ಮದ ಮಹತ್ತನ್ನು ವ್ಯಕ್ತಗೊಳಿಸುವ 'ಅಲ್ಪ' ವಸ್ತುಗಳಿಂದಲೂ ಸಾಧ್ಯ, ಬ್ರಾಡ್ಲೆಯ ಸಿದ್ಧಾಂತದ ಮುಖ್ಯಾಂಶಗಳನ್ನು ಹೀಗೆ ಸೂಚಿಸಬಹುದು.

1. ಅತಿಶಯವಾದ ಗಾತ್ರ ಅಥವಾ ಶಕ್ತಿ
2. ಮೊದಲನೆಯದಾಗಿ ಅದು ನಮ್ಮ ವ್ಯಕ್ತಿತ್ವವನ್ನು ಆಘಾತಗೈಯುವ ಅಥವಾ ದೂರಕ್ಕೆಸೆಯುವ ಒಂದು ನೇತ್ಯಾತ್ಮಕ ಸ್ಥಿತಿ,
3. ಆದರೆ, ಕೂಡಲೆ ಒದಗುವ ಒಂದು ಬಗೆಯ ಆತ್ಮವಿಸ್ತಾರ ಅಥವಾ ಉತ್ಥಾನದಲ್ಲಿ ನಾವು ವಸ್ತುವಿನೊಂದಿಗೆ ಒಂದಾದವೆನ್ನುವಂತಹ ಸೌಂದರಾನುಭವ. ಇವುಗಳಲ್ಲಿ ಮೂರನೆಯ ಅಂಶ ಎಲ್ಲ ಭವ್ಯತೆಯ ಅನುಭವದಲ್ಲೂ ಇದ್ದು, ಸೌಂದರಾನುಭವವೆಲ್ಲದಕ್ಕೂ ಸಾಮಾನ್ಯವೆಂಬಂತೆ ತೋರುತ್ತದೆ.

ಡಾ. ಬಸ್ವಾಂಕೆ ಇದನ್ನು ಕ್ಲಿಷ್ಟ ಸೌಂದರ್ಯವೆಂದು ಕರೆದಿದ್ದಾರೆ. ಏಕೆಂದರೆ ಇಲ್ಲಿ ನಮಗೊದಗುವ ಸಾಮರಸ್ಯಾನುಭವ ನಮ್ಮ ಅಹಂಕಾರವನ್ನು ಹಾಗೆಯೇ ಉಳಿಸುವುದರ ಮೂಲಕವಲ್ಲ; ಅದನ್ನು ಶೋಷಣೆಗೈಯುವುದರ ಮೂಲಕ, ಭವ್ಯತೆ ನಮ್ಮನ್ನು ಕೇವಲ ಅಪ್ಪಳಿಸುವುದರಲ್ಲೇ ಪರ್ಯವಸಾನವಾದರೆ ಅದರ ಬಗ್ಗೆ

ಕೇವಲ ಭೀತಿಮಾತ್ರ ಸಾಧ್ಯವೇ ಹೊರತು ರಸಾನುಭವವಲ್ಲಿ ಬಂತು? ಆದರೆ ಭವ್ಯತೆಯಲ್ಲಿ ಮೊದಲು ನಮ್ಮನ್ನು ಆ ಅನುಭವ ಅಪ್ಪಳಿಸಿದರೂ, ಆಗ ಬೇರೊಂದು ಶಕ್ತಿ ನಮ್ಮನ್ನು ತುಂಬಿ ಮೇಲಕ್ಕೆತ್ತಿ ಆ ಮಹತ್ತನ್ನು ಅನುಭವಿಸುವ ಶಕ್ತಿಯನ್ನು ನೀಡುತ್ತದೆ. ಇದೇ ಭಾವನೆಯನ್ನು ಎಸ್. ಅಲೆಕ್ಸಾಂಡರ್ ಅವರು ಸಮರ್ಥಿಸುತ್ತಾ ಹೀಗೆ ಹೇಳುತ್ತಾರೆ: “ಭವ್ಯತೆ ಮೊದಲು ನಮ್ಮ ಮನಸ್ಸನ್ನು ತಲ್ಲಣಗೊಳಿಸುತ್ತದೆ. ಆದರೆ ಅದನ್ನು ಸವಿಯುವ ಒಂದು ಸಮಸ್ಥಿತಿ ಮತ್ತು ಸಾಮರಸ್ಯ ಮನಸ್ಸಿಗೆ ಒದಗುವುದು ಅನಂತರ, ಬಿರುಗಾಳಿ ಭಯಂಕರವಾಗಿ ತೋರುವುದು ಭೀತನಿಗೆ ಮಾತ್ರ; ಆದರೆ ಅದನ್ನು ಒಲಿದು ನೋಡುವವನಿಗೆ ಅದು ಭವ್ಯ ಮತ್ತು ಶಕ್ತಿಪೂರ್ಣ, ಆದ್ದರಿಂದ ಭವ್ಯತೆ ಎಂದರೆ ನಮ್ಮನ್ನು ತಲ್ಲಣಗೊಳಿಸುವ ಸನ್ನಿವೇಶದಲ್ಲೂ ಅದರ ಭೂಮತೆಯನ್ನರಿಯುವ ಸಾಮರಸ್ಯ.... ಈ ಭವ್ಯತೆ ಒಂದು ರೀತಿಯಲ್ಲಿ ಕ್ಲಿಷ್ಟ ಸೌಂದರ್ಯ; ಆದರೆ ಎಲ್ಲ ಕ್ಲಿಷ್ಟ ಸೌಂದರ್ಯವೂ ಭವ್ಯವಲ್ಲ. ಈ ಕಾರಣದಿಂದ ಭವ್ಯತೆ ಎನ್ನುವುದು ಸೌಂದರ್ಯದ ಬೇರೆ ಒಂದು ರೂಪ)

ಕುಮಾರವ್ಯಾಸದಲ್ಲಿ ಭವ್ಯ ಕಲ್ಪನೆ ಮಿಂಚಿನ ಹೊದರು ಹುರಿಗೊಂಡಂತೆ ರವಿಶತ ಉದುರಿದವು ಮೈಮುರಿದು ನಿಂದೆಡೆ ದೇವರಂಗದಲ್ಲಿ ಸವೆದುದಾಸ್ಥಾನವನ್ನು ಘನ ತೇ ಜದ ಲಹರಿ ಲೀಲೆಯಲಿ ಹರಿ ತೋ ರಿದನು ನಿರುಪಮ ವಿಶ್ವರೂಪವನಾ ಮಹಾಸಭೆಗೆ 1571 ಚರಣಮಂಗುಟದಲ್ಲಿ ದೇವರು ತುರುಗಿದರು ನೊಸಲಿನಲಿ ಕಮಲಜನುರದಲಗ್ಗದ ರುದ್ರನಾಸ್ಯದೊಳಗ್ನಿ ವಾಯುಗಳು ಬೆರಳಲಿಂದಾದಿಗಳು ನಯನಾಂ ಬುರುಹದಲಿ ರವಿ ನಾಭಿಯಲಭವ ವರ ಭುಜಾಗ್ರದೊಳಬಳ ದಿಗುಪಾಲಕರು ರಂಜಿಸಿತು. I58 ಸುರರು ಖಚರರು ಕಿನ್ನರರು ಕಿಂ ಪುರುಷರನುಪಮ ಸಿದ್ಧವಿದ್ಯಾ ಧರರು ವಸುಗಳು ಮನುಗಳಾದಿತ್ಯರು ಭುಜಂಗಮರು ಗರುಡ ಗಂಧರ್ವಾಶ್ವಿನೀ ದೇ ವರು ಸುವಿಶ್ವೇ ದೇವರಖಿಳಾ ಪರೆಯರೆಸಿದರು. ರೋಮ ರೋಮದ ಕುಳಿಯ ಚೌಕದಲ್ಲಿ ಬೆ ಬಲ ಭುಜದಲಿ ಪಾರ್ಥನೆಡದಲ್ಲಿ ಹಲವರನು ಚರಣದಲ್ಲಿ ಧರ್ಮಜ ಕಲಿ ವೃಕೋದರ ನಕುಲ ಸಹದೇವಾದಿ ಯಾದವರು ಲಲಿತಕಾಂರಿಯೊಳಖಿಳ ತಾರಾ ವಳಿಗಳೆಯಲಗಹವಿರಲು ತೊಳ ತೊಳಗಿ ಮೆರೆದನು ವಿಶ್ವರೂಪ ವಿಹಾರಿ ಮುರವೈರಿ: 60 ಕವಿಗಳು ಕಂಗಳು, ನಾಸಾ “ವಿವರದಲ್ಲಿ ಹೊಗೆಮಸಗಿ ದಳ್ಳುರಿ ತಿವಿದುದಾಕಾರವನ್ನು ಕವಿದುದು ಕಾಂತಿ ರಸದಸೆಗೆ ರವಿಯ ತಗಡನೆ ತಳಿತವಾಯುಧ ನಿವಹ ಸಾಸಿರಭುಜದ ಬಹುಳತೆ ಯವಗಡಿಸಿ, ವೈಕುಂಠನೆಸೆದನು. ವಿಶ್ವರೂಪದಲ್ಲಿ” (ಕರ್ನಾಟಕ ಭಾರತ ಕಥಾಮಂಜರಿ-ಉದ್ಯೋಗ ಪರ್ವ-ಪು.339-340) ಭಾಗವತ ಕವಿಯ ಭವ್ಯ ಕಲ್ಪನೆ ಶ್ರೀಕಷ್ಣನ ಜನನದ ಭವ್ಯತೆಗೆ ಭಾಗವತದ ಕವಿ, ಕಾರಿರುಳಿನ ರುದ್ರಗಂಭೀರ ಚಿತ್ರದಿಂದ, ಸಾವಿರ ಹೆಡೆಯನ್ನು ತೆರೆದು ಕೃಷ್ಣನಿಗೆ ಕೊಡೆವಿಡಿದ ಆದಿಶೇಷನ ಸೇವೆಯಿಂದ, ದಾರಿತೆರೆದ ಯಮುನಾ ತರಂಗಿಣಿಯ ವಿನಯದಿಂದ ಒಂದು ಬಹತ್ ಪ್ರತಿಮೆಯನ್ನೇ ನಿರ್ಮಿಸಿದ್ದಾನೆ ಭವ್ಯತೆಯ ವಿಧಗಳು ಮೌನ ಭವ್ಯ:-ರಾಮಾಯಣದ ತುಂಬ ಭರತನಿಂದ ತಿರಸ್ಕೃತೆಯಾದ ಕೈಕೆಯ ಚಿತ್ರಣವೂ ಮೌನ ಭವ್ಯವಾಗಿ ವ್ಯಾಪಿಸುತ್ತದೆ; ಊರ್ಮಿಳೆಯ ನೀರವಧ್ಯಾನ ಮೌನ ಕಾಳಿದಾಸನ ಕುಮಾರಸಂಭವದಲ್ಲಿ, ಶಿವನ ತಪೋವನವನ್ನು ಕಾಮನನ್ನು ಪ್ರವೇಶಿಸಿದಾಗ ಆದ ಚಾಂಚಲ್ಯತೆಯನ್ನು ಕಂಡು ನಂದಿಯು ತನ್ನ ಬೆರಳ ಸನ್ನೆಯಿಂದ ಸಮಸ್ತ ಕಾನನದಲ್ಲೇ ಸ್ತಬ್ಧವನ್ನಾಗಿಸಿದ ಚಿತ್ರಣದಲ್ಲಿ ಮೌನ ಭವ್ಯತೆಯನ್ನು ಕಾಣಬಹುದು.

ಉದಾ:-"ವ್ಯಕ್ತ ಕಂಪನ ನಿಂತು ಭ್ರಮರ ಸಂಭ್ರಮ ನಿಂತು ಅಂಡಜ ಧ್ವನಿ ನಿಂತು ಮೃಗಚಲನೆ ನಿಂತು ಆತನಾಣತಿ ಸಂದು ಸರ್ವಕಾನನಮಂದು ಚಿತ್ರಾರ್ಪಿತಾರಂಭಮಾಗಿರ್ದದಂದು: ಪು.ತಿ.ನ ಅವರ ಒಂದು ಅಪೂರ್ವ ಪದ್ಯ (ಚಿಕುಹೂ) ದಲ್ಲಿನ ಈ ಚಿಂತನೆಯನ್ನು ನೋಡಿ: "ಚಿಕುವೂ ಕುವ್ವೂ ಏನ್ ಸವಿ ಒಂದೇ ಸರದೊಂದೇ ಛವಿ ಅಜರಾಮರವಿದು ಅಚ್ಚರಿ ಪುರಾಣ ನೂತನವು.

ಕೋಟಿ ಕೋಟಿ ಕೋಗಿಲೆ ಮೈ ತರಗೆಲೆಯಂತುದುರಿವೆ ಸೈ ಇದನು ಹಿಡಿದು ಬಿಡುವಾಟದಿ ಋತು ಋತು ಯುಗ ಯುಗವೂ" (ಗಣೇಶದರ್ಶನ, ಪು ೨೩)

ಈ ಪದ್ಯದಲ್ಲಿ ಮೊದಲ ನಾಲ್ಕು ಸಾಲು ಸುಂದರವಾಗಿವೆ; ಕೋಗಿಲೆಯ ದನಿಯನ್ನು ಕೇಳಿ ಅದರ ಮಧುರಾನುಭವದಲ್ಲಿ ಕವಿ ಅಚ್ಚರಿಪಡುತ್ತಾರೆ. ಆದರೆ ಆ ದನಿಯ ಹಾದಿಯಲ್ಲಿ ಕವಿ ಒಂದು ಅಸಾಮಾನ್ಯವಾದ ಭಾವನೆಯನ್ನು ತಲಪುತ್ತಾರೆ. ಚಿಂತನಾ ಯೋಗ್ಯವಾದ ಆ ಭಾವನೆ ಭವ್ಯವಾಗಿದೆ. ಕೋಗಿಲೆಯ ಕೊರಳ ಮೂಲಕ ಹಾದುಬರುವ ಈ ಸವಿದನಿ ಚಿರಂತನವಾದುದು; ಆದರೆ, ಕೋಗಿಲೆಗಳೇನಿದ್ದರೂ ಈ ದನಿಯನ್ನು ಹಿಡಿದು ಬಿಡುವ ಕ್ಷಣಿಕ ಮಾಧ್ಯಮಗಳು ಯುಗಯುಗಾಂತರದಿಂದ ಋತು ಋತುಗಳಲ್ಲಿ ಈ ಒಂದು ಚಿರಂತನವಾದ ನಾದವನ್ನು ಹಿಡಿದು ಬಿಡುವ ಆಟದಲ್ಲಿ ಕೋಟಿ ಕೋಟಿ ಕೋಗಿಲೆಯ ಮೈ ತರಗೆಲೆಯಂತೆ ಉದುರಿಹೋಗಿವೆ. ಆದರೆ ಆ ದನಿ ಮಾತ್ರ 'ಅಜರಾಮರವಿದು ಅಚ್ಚರಿ ಪುರಾಣ ನೂತನವು', ಈ ಒಂದು ಭಾವನೆಯ ಚಿಂತನೆ ನಮ್ಮಲ್ಲಿ ಭವ್ಯಾನುಭವವನ್ನು ನೀಡುತ್ತದೆ. ಈ ದನಿಯ ಚಿರಂತನತೆಯ ಚಿಂತನೆಯಂತ ಮೌನವೂ, ಮೌನದ ಚಿತ್ರಣವೂ ಭವ್ಯವಾಗುತ್ತದೆ.

ಸರಣಿ ಭವ್ಯ ಮೊದಲು ಸಹಜವಾಗಿಯೇ ಭವ್ಯತೆಯನ್ನು ಅನುಭವಕ್ಕೆ ತರುವ ವಸ್ತು ವರ್ಣನೆಯೊಂದನ್ನು ಮಾಡಿ, ಅನಂತರ ಈ ಭವ್ಯ ವಸ್ತುವಿನಂತೆ ಸಹಜವಾಗಿ ಪರಿಣಾಮ ಮಾಡಲಾಗದೆನ್ನಿಸುವಂತಹ ಮತ್ತೊಂದು ವಸ್ತುವಿನ ಚಿತ್ರವನ್ನು ತಂದು, ಮೊದಲು ಉಂಟುಮಾಡಿದ ಭವ್ಯಾನುಭವವನ್ನೇ ಮೆಟ್ಟಿ ನಿಲ್ಲುವಂತಹ ಅನುಭವವನ್ನು ಉಂಟುಮಾಡುವುದು. ಇದರ ನಿದರ್ಶನಕ್ಕೆ ದೊರೆತ ಒಂದೇ ಒಂದು ಕವಿತೆ, ಕುವೆಂಪು ಅವರ 'ನಾನು' (ಕಲಾಸುಂದರಿ ಪು.೬೬), ಎನ್ನುವುದು, ಈ ಪದ್ಯದಲ್ಲಿ ಕವಿ ಮೊದಲು ಸಮಸ್ತ ವಿಶ್ವದ ಭವ್ಯಾನುಭೂತಿದಾಯಕಗಳಾದ ಹಲವು ಚಿತ್ರಗಳನ್ನು ಕೊಡುತ್ತಾರೆ: ಸೀಮೆಯಿಲ್ಲದ ಸ್ವಪ್ನನಿದ್ರೆಯ ಮಹಾ ಸ್ವಪ್ನದಂತೆ ಗಗನ ಗಂಭೀರ ನೀಲಿಮೆ ಮೇಲೆ ನಿಂಷ್ಪಂದ ಮೂಕವಾಗಿದೆ; ಕೆಳಗೆ ವಿಕ್ಷುಬ್ಧ ವಾರಿಧಿಯ ವಿಪುಲ ನೀಲಿಮೆ ಭೂವಲಯವನ್ನು ಸುತ್ತಿ ತೆರೆಗಳಾಟದಲ್ಲಿ ತೊಡಗಿವೆ; ಪರ್ವತಶ್ರೇಣಿಗಳು ಧ್ಯಾನಯೋಗಿಗಳಂತೆ ನಿಬಿಡಾರಣ್ಯದ ವಲ್ಕಲವನ್ನುಟ್ಟು ನಿಂತಿವೆ; ನದನದಿಗಳು ನಿರಂತರವಾಗಿ ಕಡಲಿಗೆ ಹರಿದಿವೆ; ಪ್ರಳಯ ಜಿಹ್ವಾಗ್ರದಲ್ಲಿ ರಾಜ್ಯಗಳು ಎದ್ದು, ಸಂಸ್ಕೃತಿಗಳನ್ನು ಕಟ್ಟಿ ಬಣ್ಣದ ಗುಳ್ಳೆಯಂತೆ ಮರೆಯಾಗಿವೆ; ಇವೆಲ್ಲದರ ನಡುವೆ ಮಾನವನು ಅಧಿಕಾರ ಸಂಪತ್ತುಗಳಿಗೆ ಕಾತರನಾಗಿ ಕಾಲವರ್ತಿಯನ್ನು ಪೋಷಿಸುವ ತೈಲವಾಗಿ ನುಗ್ಗುತ್ತಿದ್ದಾನೆ, ಇದೆಲ್ಲವನ್ನೂ ಲೆಕ್ಕಿಸದೆ ತನಗಿಂತಲೂ ಶತಕೋಟಿ ಪಾಲು ಹಿರಿದಾದ ಇನಮಂಡಲವನ್ನು ಸುತ್ತಿ, ನಿಷ್ಕರುಣ ನಿಯಮದಲ್ಲಿ ಈ ಭೂಗೋಲ ಆಕಾಶದೇಶದಲ್ಲಿ ತಿರುಗುತ್ತಿದೆ. ಗಾತ್ರದಲ್ಲಿ ಸೂರ್ಯನನ್ನೂ ಮೀರಿರುವ ನಕ್ಷತ್ರ ಕೋಟಿಗಳು ಚಿಂತೆ ಬಳಲುವಾಹಕಾಶದಲ್ಲಿ ಜ್ಯೋತಿವತ್ತರಗಳತಿ ದೂರದವಕಾಶದಲ್ಲಿ ಖಚಿತವಾಗಿವೆ" ಹೀಗೆ ಕವಿಯ ಒಂದೊಂದೂ ಭವ್ಯವಾದ ಚಿತ್ರವೂ ನಮ್ಮ ಅಂತರಂಗದಲ್ಲಿ ನಮ್ಮನ್ನು ಆಕ್ರಮಿಸಿ, ಅಪ್ಪಳಿಸಿ, ಮೂಕರನ್ನಾಗಿ ಮಾಡುತ್ತದೆ. ಈ ಮಹಾಬ್ರಹ್ಮಾಂಡದ ಭೂಮತೆಯಿಂದ ಅಪ್ಪಳಿಸಲ್ಪಟ್ಟ ಕವಿಗೆ ಎನ್ನಿಸುತ್ತದೆ “ನಾನಿಹೆನು ಕ್ಷುದ್ರದಲ್ಲಿ ಕ್ಷುದ್ರತಮ ನರನಾಗಿ" ಎಂದು. ಆದರೆ ತೆಕ್ಕನೆಯೇ ಈ ಕ್ಷುದ್ರದಲ್ಲಿ ಕ್ಷುದ್ರತಮನಾಗಿ ಬ್ರಹ್ಮಾಂಡದ ಭವ್ಯತೆಯ ಆಘಾತದಿಂದ ಹುಡಿಯಾಗಿ ನಿಂತ ಈ ನರನ ಚಿತ್ರವೇ ಈ ಎಲ್ಲ ಭದ್ರತೆಗೂ ಮಿಗಿಲಾಗಿ ನಿಲ್ಲುವುದೆಂದು ಕವಿ ಚಿತ್ರಿಸಿದ್ದಾರೆ...........ನಾನಿಹೆನು ಕ್ಷುದ್ರದಲ್ಲಿ ಕ್ಷುದ್ರತಮ

ನರನಾಗಿ, ಎಲ್ಲವನ್ನು ನನ್ನ ಮನಸಿನ ಭಾವ ಜಾಲದಲ್ಲಿ ಸೆರೆಗೈದು! ಅಣೋರಣಿಯನು ನಾನು ಮಹತೋ ಮಹೀಯವನು ನುಂಗಿಹೆನು: ನನ್ನ ಚೇತನ ಜಲಧಿಯಲಿ ತೇಲಿ ಬಾಳುತಿಹುದೀ ವಿಶ್ವ, ಸ್ವಪ್ನ ಮಾಲೆಯ ಹೋಲಿ ಇಲ್ಲಿ ಆಗಲೇ ಬ್ರಹ್ಮಾಂಡದ ಭವ್ಯತೆಯ ಮುಂದೆ ಯಾವ 'ನಾನು' ಎನ್ನುವುದು ಕೇವಲ ಕ್ಷುದ್ರತಮವಾಗಿ ಬಿದ್ದುಹೋಗಿತ್ತೋ, ಅದೇ 'ನಾನು' ಎನ್ನುವ ವ್ಯಕ್ತಿತ್ವ, ತಟ್ಟನೆಯೇ ಆ ಭವ್ಯತೆಯನ್ನೇ ನುಂಗಿ ನೀರ್ಕುಡಿದು ನಿಲ್ಲುತ್ತದೆ. ಈ ಬ್ರಹ್ಮಾಂಡ ಎಷ್ಟೇ ಭವ್ಯವಾದರೂ, ಈ 'ನಾನು' ಈ ಎಲ್ಲವನ್ನೂ ನನ್ನ ಮನಸ್ಸಿನ ಭಾವಜಾಲದಲ್ಲಿ ಸೆರೆಗೆಯ್ಯಬಲ್ಲೆ ನಾನು ಅಣೋರಣೀಯನಾದರೂ ಈ ಮಹತೋ ಮಹೀಯವನ್ನು ನುಂಗಿದ್ದೇನೆ; ನನ್ನ ಚೈತನ್ಯದ ಜಲಧಿಯಲ್ಲಿ ಈ ವಿಶ್ವ ಸ್ವಪ್ನಮಾಲೆಯಂತೆ ತೇಲಿ ಬಾಳುತ್ತಿದೆ.- ಎಂಬ ಈ ಒಂದು ಭಾವದ ಆಲೋಚನೆಯೇ ನಮ್ಮಲ್ಲಿ ಮತ್ತೆ ಭವಾನುಭವವನ್ನುಟು ಮಾಡುತ್ತದೆ.

ಅಲ್ಪ ವಸ್ತು ಅಭಿವ್ಯಕ್ತ ಭವ್ಯ ಎಡ್ಮಂಡ್ ಬರ್ಕ್:- 'ಅಲ್ಪ' ವಸ್ತುಗಳಿಂದಲೂ ಮಹತ್ತು ಅನುಭವಕ್ಕೆ ಬರಲು ಸಾಧ್ಯ, 'ಅಲ್ಪ' ವಸ್ತುವಿನಲ್ಲಿ ಗೋಚರಿಸುವ ಮಹತ್ತೂ ಭವ್ಯತಾ ಅನುಭವವನ್ನು ಪ್ರಚೋದಿಸಬಹುದು. ಉದಾ:-ಎ.ಸಿ.ಬ್ರಾಡ್ಲೆ ಕೊಟ್ಟಿರುವ ಟರ್ಜನೀವ್ ಕವಿಯ ಒಂದು ಪದ್ಯದ ಈ ಗದ್ಯಾನುವಾದವೇ ಸಾಕು: "ನಾನು ಆಗತಾನೇ ಬೇಟೆಯನ್ನು ಮುಗಿಸಿಕೊಂಡು ತೋಟದ ಹಾದಿಯಲ್ಲಿ ಮನೆಯ ಕಡೆ ಧಾವಿಸುತ್ತಿದ್ದ, ನನ್ನ ನಾಯಿ ಮುಂದೆ ಮುಂದೆ ಓಡುತ್ತಿತ್ತು. ಇದ್ದಕ್ಕಿದ್ದಂತೆ ನನ್ನ ನಾಯಿ ತನ್ನ ನಡಿಗೆಯನ್ನು ನಿಧಾನಗೊಳಿಸಿ, ಮುಂದೇನನ್ನೂ ಕಂಡಂತೆ ಕಳ್ಳಹೆಜ್ಜೆಯಿಂದ ನಡೆಯತೊಡಗಿತು.

ನಾನು ಒಮ್ಮೆ ದಾರಿಯುದ್ದಕ್ಕೂ ಕಣ್ಣು ಹೊರಳಿಸಿದೆ; ಕಂಡೆ, ಗುಬ್ಬಚ್ಚಿ ಮರಿಯೊಂದು ತನ್ನ ಹಳದಿಯಂಚಿನ ಕೊಕ್ಕನ್ನು ಚಾಚಿ, ಮಿದು ತುಪ್ಪಳ ತಲೆಯನ್ನು ಬಾಗಿಸಿ, ಮರವೊಂದರ ಕೆಳಗೆ ಕುಳಿತಿತ್ತು.

ಅದು ಮರದ ಹರೆಯೊಂದರ ಗೂಡಿನಿಂದ ಕೆಳಕ್ಕೆ ಬಿದ್ದಿತ್ತು. ಬಿರುಸಾದ ಗಾಳಿ ತೀಡುತ್ತಿತ್ತು, ಸಾಲು ಮರದ ಕೊಂಬೆಗಳನ್ನೆಲ್ಲಾ ನಡುಗಿಸುತ್ತಿತ್ತು. ಅದು ಬಿದ್ದರೆ ಕುಳಿತು, ಒಂದಿನಿತೂ ಅಲುಗದೆ, ತನ್ನ ಎಳೆಯ, ಅರೆ ಬೆಳೆದ ಪಕ್ಕಗಳನ್ನು ಮಾತ್ರ ನಿಸ್ಸಹಾಯಕವಾಗಿ ಬಡಿಯುತ್ತಿತ್ತು.

ನನ್ನ ನಾಯಿ ನಿಧಾನವಾಗಿ ಅದನ್ನು ಸಮೀಪಿಸುತ್ತಿತ್ತು, ಆಗ ಇದಕ್ಕಿದ್ದ ಹಾಗೆಯೇ ಮರದ ಮೇಲಿನ ಕೊಂಬೆಯೊಂದರಿಂದ ಕಪ್ಪು ಕೊಕ್ಕಿನ ಗುಬ್ಬಚ್ಚಿಯೊಂದು ಕವಣೆಕಲ್ಲಿನಂತೆ ನಾಯಿಯ ಮೂಗಿನ ನೇರಕ್ಕೇ ಚಿಮ್ಮಿ, ನಾಯಿಯ ತೆರೆದ ಬಾಯಿಯ ಕರಾಳದಂಷ್ಟ್ರಕ್ಕೆ ಒಮ್ಮೆ ಇಮ್ಮೆ ಅಪ್ಪಳಿಸಿ ಕರುಣಾಪೂರ್ಣವಾಗಿ ಕಿರಿಯುತ್ತಾ ಭಿನ್ನತನುವಾಗಿ ಬಿತ್ತು.

ಅದು ತನ್ನ ಮರಿಯನ್ನು ಕಾಪಾಡಲೇಬೇಕೆಂದು ನಿರ್ಧರಿಸಿತ್ತು. ಆ ಗುಬ್ಬಚ್ಚಿ ತನ್ನಲ್ಲಿ ತಾನೇ ಅರಚಿತು; ಆ ಪುಟ್ಟ ಶರೀರ ಸಮಸ್ತವೂ ಭಯದಿಂದ ನಡುಗಿತು; ಅದರ ಕ್ಷೀಣದನಿ ರುದ್ರವಾಯಿತು. ಕರ್ಕಶವಾಯಿತು. ಹಾಗೆಯೇ ಅದು ಸತ್ತು ಬಿತ್ತು; ಅದು ತನ್ನನ್ನು ತಾನೇ ಬಲಿಕೊಟ್ಟುಕೊಂಡಿತ್ತು.

ಮರಿಯೆಡೆಗೆ ಬಾಯಿತೆರೆದು ನುಗ್ಗಿದ ನನ್ನ ನಾಯಿ ಕೊಂಬೆಯ ಮೇಲಿಂದ ವೀಕ್ಷಿಸುತ್ತಿದ್ದ ಗುಬ್ಬಚ್ಚಿಯ ಕಣ್ಣಿಗೆ ಎಂತಹ ಭಯಂಕರ ದೈತ್ಯನಾಗಿ ಕಂಡಿರಬೇಕು! ಆದರೂ ಅದು ಸುರಕ್ಷಿತವಾದ ಮರದ ಕೊಂಬೆಯ ಮೇಲೆ ನಿಲ್ಲಲಾರದೆ ಹೋಯಿತು, ತನ್ನ ಇಚ್ಛೆಗೆ ಮೀರಿದ ಪ್ರಬಲತರ ಶಕ್ತಿಯದಾವುದೋ ಅದನ್ನು ಅಲ್ಲಿಂದ ಎಳೆಯಿತು, ನನ್ನ ನಾಯಿ ಸ್ತಬ್ಧವಾಗಿ ಕ್ಷಣಕಾಲ ನಿಂತು, ನಂತರ ಮೆತ್ತಗಾಗಿ ಹಿಂದೆ ಸರಿಯಿತು, ಆ ಶಕ್ತಿಯನ್ನು ಅದು ಕೂಡ ಒಪ್ಪಿಕೊಳ್ಳಬೇಕಾಯಿತು, ನಾನು ನಾಯಿಯನ್ನು ಹಿಂದಕ್ಕೆ ಬರುವಂತೆ ಕರೆದೆ. ನಾನು ಅಲ್ಲಿಂದ ಮುಂದುವರಿದಂತೆ ಏನೋ ಒಂದು ಬಗೆಯ ಗೌರವ ಭಾವ ನನ್ನಲ್ಲಿ ಸಂಚಾರವಾಯಿತು.

ಹೌದು; ನಗಬೇಡಿ, ಆ ಪುಟ್ಟ ಗುಬ್ಬಚ್ಚಿಯ ಪರಾಕ್ರಮದ ಎದುರಿಗೆ, ತನ್ನ ಮರಿಯನ್ನು ಕುರಿತು ಅದು ತೋರಿದ ಪ್ರೀತಿಯ ಮಹತ್ತಿನ ಎದುರಿಗೆ, ನಿಜವಾಗಿಯೂ ಆ ಪುಟ್ಟ ಹಕ್ಕಿಯನ್ನು ಕುರಿತು ನನ್ನಲ್ಲಿ ಗೌರವಭಾವ ಸಂಚಾರವಾಯಿತು. ನನಗನಿಸಿತು, ಮೃತ್ಯುವಿಗಿಂತ, ಮೃತ್ಯುವಿನ ಭೀತಿಗಿಂತ ಮಹತ್ತಾದದ್ದು, ಪ್ರೀತಿ ಪ್ರೀತಿಯಿಂದ, ಪ್ರೀತಿಯಿಂದ ಮಾತ್ರವೇ ಈ ಬದುಕು ನಿಂತಿದೆ; ಈ ಬದುಕು ಸಾಗುತ್ತಿದೆ.-A.C. Bradley: Oxford Lectures On Poetry: On the Sub lime. p.44.

ಈ ಒಂದು ಸಂದರ್ಭದಲ್ಲಿ ಆ ಗುಬ್ಬಚ್ಚಿಯ ಹೋರಾಟ, ಪರಿಭಾವಿಸಿದಷ್ಟೂ ಭವವಾಗುತ್ತದೆ. ಭವ್ಯತೆಯನ್ನುಕ್ಕಿಸುವ ಗಾತ್ರವಾದರೂ ಆ ಸಂದರ್ಭದಲ್ಲಿ ನಾವು ಕಾಣುವ ಪಾತ್ರಗಳಲ್ಲಿಲ್ಲ. ಗುಬ್ಬಚ್ಚಿಯಾಗಲೀ ನಾಯಿಯಾಗಲೀ ಸಣ್ಣ ಪ್ರಾಣಿಗಳು. ಈ ಸಂದರ್ಭದಲ್ಲಲ್ಲದೆ ಬೇರೆಯ ಹೊತ್ತಿನಲ್ಲಿ ಆ ಗುಬ್ಬಚ್ಚಿ ಅವಸ್ಥೆಗೆ ಪಾತ್ರವಾದ ಸಣ್ಣಪ್ರಾಣಿ, ಆದರೆ ಈ ಸುದೇಶದಲ್ಲಿ ಅದರ ಅಲ್ಪುತ್ರ ಅರಿವಿಗೆ ಬರುವುದಿಲ್ಲ, ಅನುಭವಕ್ಕೆ ಬರುವುದೇನಿದ್ದರೂ ತನ್ನ ಮರಿಗಿ ಈ ಗುಬ್ಬಚ್ಚಿ ನಡೆಸಿದ ಹೋರಾಟದಲ್ಲಿ ಪ್ರಕಟವಾಗುವ ತ್ಯಾಗ ಮತ್ತು ಪ್ರೇಮ, ಆ ಗುಬ್ಬಕ್ಕಿಯ ತ್ಯಾಗ ನಮ್ಮನ್ನು ಕರಗಿಸಿದರೆ, ನಮ್ಮ ಅಹುವ್ಯಕ್ತಿತ್ವವನ್ನು ಇಲ್ಲ ಗೈದು ಅದರ ತ್ಯಾಗದ ಬಗ್ಗೆ ವಿಸ್ಮಯ- ಗೌರವವನ್ನು ಉಕ್ಕಿಸಿದರೆ, ಆ ತ್ಯಾಗದ ಹಿಂದಿರುವ ಆತ್ಮದ ಅನುಭವವನ್ನುಂಟುಮಾಡುತ್ತದೆ.

ಭವ್ಯತಾ ಅನುಭವ ಹೊರಡಬಹುದಾದ ಸಂದರ್ಭಗಳು "ಭವ್ಯತಾ ಅನುಭವದ ಸ್ಪರ್ಶ ನಮಗೆ ಕವಿಕೃತಿಗಳಲ್ಲಿ ನಾನಾ ರೀತಿಯಲ್ಲಿ ಆಗಬಹುದು,

1. ಪಾತ್ರಚಿತ್ರಣದಲ್ಲಿ, ೨)ಪ್ರತಿಮಾ ನಿರ್ಮಾಣದಲ್ಲಿ,
2. ವರ್ಣನೆಗಳಲ್ಲಿ, ಭವ್ಯತಾ ಅನುಭವಕ್ಕೆ ಕೇವಲ ವರ್ಣನೆಯ ಬೃಹತ್ತು ಅತ್ಯವಶ್ಯಕವೇನಲ್ಲ. ಅಂತೆಯೇ ಅತಿ ಗಂಭೀರವಾದ ಪದಪುಂಜ,s ಬೇಕಾಗಿಲ್ಲ. ಸಾಮಾನ್ಯವಾದ, ಸರಳವಾದ ಚಿತ್ರಗಳಿಂದಲೂ ಸಾಧ್ಯ. ಕಡೆಗೆ ಒಂದು ಉಪಮೆಯೇ ಸಾಕು ಈ ಅನುಭವಕ್ಕೆ, ಕವಿ ಬೇಂದ್ರೆಯವರು ಶ್ರಾವಣವನ್ನು ಕುರಿತು ಮಾಡುವ ವರ್ಣನೆಯಲ್ಲಿ

"ಗುಡ್ಡ ಗುಡ್ಡ ಸ್ಥಾವರಾಲಿಂಗ ಅವಕ ಅಭ್ಯಂಗ ಎರಿತವನ್ನೊ ಹಂಗ ಸುತ್ತೆಲ್ಲ ಕೂಡ್ಯಾವ ಮೋಡ ನೋಡ ನೋಡ" ದವನದ ಹುಣ್ಣಿಮೆಯ ಇರುಳನ್ನು ವರ್ಣಿಸುತ್ತಾ "ಆಕಾಶ ಅನಿಸತದ ಪ್ರಕಾಶ ಮಹಾಲಿಂಗ ನೆಲ ಅಗಲ ಪೀಠಧಾಂಗ" ಎನ್ನುವಲ್ಲಿ: ಕುವೆಂಪು ಅವರು-'ಪಾತಾಳದಿಂದಂಬರಕೆ ಹೆಡೆಯೆತ್ತುವೋಲ್ ಅಗ್ನಿಶೇಷ' ಎಂದು ಕೊಡುವ ಭವ್ಯೋಪಮಾ ಚಿತ್ರದಲ್ಲಿ, ಇನ್ನೂ ಇಂತಹ ಅನೇಕ ಚಿತ್ರಣಗಳಲ್ಲಿ ಭವ್ಯತೆಯ ಸ್ಪರ್ಶ ನಮಗಾಗುತ್ತದೆ.

**Conclusion**

ಲಾಂಗಿನಸ್‌ನ ಭವ್ಯತೆ (Sublimity) ಸಿದ್ಧಾಂತದ ಉಪಸಂಹಾರ ಹೀಗಿದೆ: ಲಾಂಗಿನಸ್‌ನ ಪ್ರಕಾರ, ಭವ್ಯತೆಯು ಕೇವಲ ಅಲಂಕಾರಿಕ ಶೈಲಿಯಲ್ಲ; ಅದು ಉನ್ನತ ಚಿಂತನೆ ಮತ್ತು ತೀವ್ರ ಭಾವನೆಗಳ ಶ್ರೇಷ್ಠ ಅಭಿವ್ಯಕ್ತಿ. ಉತ್ತಮ ಸಾಹಿತ್ಯವು ಓದುಗನಿಗೆ ಕೇವಲ ಆನಂದ ನೀಡದೆ, ಅವನನ್ನು ಭಾವಪರವಶಗೊಳಿಸಿ ಉನ್ನತ ಹಂತಕ್ಕೇರಿಸಬೇಕು. ಭವ್ಯತೆಯು ಪ್ರತಿಭೆ, ಭಾಷಾಸೌಂಧರ್ಯ ಮತ್ತು ಉದಾತ್ತ ಭಾವನೆಗಳ ಸಮ್ಮಿಲನವಾಗಿದ್ದು, ಕಾಲವನ್ನು ಮೀರಿ ನೆಲೆನಿಲ್ಲುವ ಸಾರ್ವಕಾಲಿಕ ಸಾಹಿತ್ಯದ ನಿಜವಾದ ಜೀವಾಳವಾಗಿದೆ.

## Reference


1. ತೌಲನಿಕ ಕಾವ್ಯಮೀಮಾಂಸೆ-ಡಾಕ್ಟರ್ ಎಚ್ ತಿಪ್ಪೇರುದ್ರಸ್ವಾಮಿ
2. ವಿಮರ್ಶೆಯ ಪರಿಭಾಷೆ-ಡಾಕ್ಟರ್ ಒ ಎಲ್ ನಾಗಭೂಷಣ ಸ್ವಾಮಿ
3. ಕಾವ್ಯಾರ್ಥ ಪದಕೋಶ-ಡಾಕ್ಟರ್ ಜಿ ಎಸ್. ಶಿವರುದ್ರಪ್ಪ
4. ಪಾಶ್ಚಾತ್ಯ ಕಾವ್ಯ ಮೀಮಾಂಸೆ-ವಿ ಎಮ್ ಇನಾಮ್ದಾರ್
5. ಪಾಶ್ಚಾತ್ಯ ಕಾವ್ಯ ಮೀಮಾಂಸೆ ದೃಷ್ಟಿ ಸೃಷ್ಟಿ ಡಾಕ್ಟರ್ ಎಸ್ ಎಂ ಹಿರೇಮಠ್.
6. ವಿಮರ್ಶೆಯ ಮೂಲ ತತ್ವಗಳು-ಡಾಕ್ಟರ್ ಎಚ್ ತಿಪ್ಪೇರುದ್ರಸ್ವಾಮಿ
7. ಸೌಂದರ್ಯ ಸಮೀಕ್ಷೆ-ಜಿಎಸ್ ಶಿವರುದ್ರಪ್ಪ
8. ವಿಮರ್ಶೆಯ ಪೂರ್ವ ಪಶ್ಚಿಮ ಜಿಎಸ್ ಶಿವರುದ್ರಪ್ಪ
9. ಪಾಶ್ಚಾತ್ಯ ಕಾವ್ಯ ಮೀಮಾಂಸೆ ಒಳನೋಟಗಳು-ಜಿಎಸ್ ಶಿವರುದ್ರಪ್ಪ
10. ಸಮಗ್ರ ಪಾಶ್ಚಾತ್ಯ ಕಾವ್ಯ ಶಾಸ್ತ್ರ-ಪ್ರೊಫೆಸರ್ ಮಲ್ಲಪ್ಪ ಹೊಸೂರ್